ವಿಶೇಷ ಸಂಚಿಕೆ

ಕಲ್ಯಾಣ ಕಿರಣ

ಜೂನ್ 2003

ಬೆಲೆ ರೂ. 5-00/-



ಬಸವ ಕಲ್ಯಾಣದ ಜಗದ್ಗುರು ಅಲ್ಲಮ ಪ್ರಭು

ಶೂನ್ಯಪೀಠದ ಪ್ರಥಮ ವಾರ್ಷಿಕೋತ್ಸವ

Digitalized by e-Sahithya Documentation Forum
Sponsored by Sarayu Foundation Trust

ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ
9 ನೇ ಲಿಂಗೈಕ್ಯ ಸಂಸ್ಮರಣೆಯಲ್ಲಿ



ಬಸವ ತತ್ತ್ವ ಬೋಧಿಸಲು ಜನ್ಮ ತಳೆದು ಬಂದಿರಿ
ಬಸವ ತಂದೆ ಕರುಣೆ ಹೊಂದಿ [illegible]
ನಿಶಿತಮತಿಯು ನೀವಾಗಿ ಕ್ರಾಂತಿಯೋಗಿಯಾದಿರಿ
ಶುಭಜೀವನ ಜ್ಯೋತಿಯಲಿ [illegible]

Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣದ ಜ್ಯೋತಿ

- ಮಾತಾಜಿ

ಜ್ಯೋತಿ ಬೆಳಗುತಿದೆ ಕಲ್ಯಾಣದ ಜ್ಯೋತಿ ಬೆಳಗುತಿದೆ ॥ಪ॥
ಮನುಕುಲದ ಲೇಸನು ಬಯಸಿದ ಬಸವ ಗುರು
ಕಲ್ಯಾಣ ಪುರದೊಳು ಅಂದು ಹೊತ್ತಿಸಿದ ॥ಅ.ಪ॥
ಕಲ್ಯಾಣವೆ ಪ್ರಣತೆಯಾಗಿ ಅದರೊಳು
ಭಕ್ತಿರಸವೆ ತೈಲವಾಗಿ
ಸದಾಚಾರದ ಬತ್ತಿ ಹಿಡಿದು ಬಸವಣ್ಣನೆಂಬ ಜ್ಯೋತಿ
ಮುಟ್ಟಲು ಪರಮ ಪ್ರಕಾಶವ ಚೆಲ್ಲವರಿದು ॥1॥
ಅಲ್ಲಮ ಪ್ರಭುದೇವ ಸುಜ್ಞಾನಿ
ಶ್ರೀ ಚನ್ನಬಸವಣ್ಣ
ವೀರವಿರಾಗಿಣಿ ಶ್ರೀ ಅಕ್ಕಮಹಾದೇವಿ
ಸನ್ನುತ ಶರಣರು ಹಚ್ಚಿದ ಕಲ್ಯಾಣ ॥2॥
ಶ್ರೀ ಸಿದ್ಧರಾಮೇಶ್ವರ ಮಡಿವಾಳ
ಮಾಚಯ್ಯ ಕೇತಯ್ಯ
ಹರಳಯ್ಯ-ಮಧುವಯ್ಯ ಅಂಬಿಗರ ಚೌಡಯ್ಯ
ಹೆಮ್ಮೆಯ ಶರಣರು ಹಚ್ಚಿದ ಕಲ್ಯಾಣ ॥3॥
ನೀಲಮ್ಮ ನಾಗಮ್ಮ ಮುಕ್ತಾಯಿ
ಶರಣೆ ಕಲ್ಯಾಣಮ್ಮ
ಅನುಭವ ಮಂಟಪದಿ ಲಿಂಗದೇವನ ನೆನೆದು
ಜಯ ಜಯವೆನ್ನುತ ಶರಣರು ಹಚ್ಚಿದ ॥4॥
ಮೋಳಿಗೆ ಮಾರಯ್ಯ ಆತನ ಸತಿ
ಜ್ಞಾನಿ ಗಂಗಾದೇವಿ
ಆಯ್ದಕ್ಕಿ ಮಾರಯ್ಯ ಲಕ್ಕಮ್ಮ ಸತ್ಯಕ್ಕ
ಚಿನ್ಮಯ ಶರಣರು ಹಚ್ಚಿದ ಕಲ್ಯಾಣ ॥5॥
ಸದ್ಗುರು ಲಿಂಗಾನಂದರ ಸಂಕಲ್ಪದಿಂ
ಬಸವಾತ್ಮಜೆ ಮಾತೆಯು
ಕಾಯಕ ದಿನದಂದು ಕಲ್ಯಾಣ ಪರ್ವದಿ
ಸಚ್ಚಿದಾನಂದನ ಶರಣರ ಕೂಡಿಸಲು ॥6॥

(ಶ್ರೀ ನಿಜಗುಣಶಿವಯೋಗಿಗಳು ಬರೆದ ಜ್ಯೋತಿ ಬೆಳಗುತಿದೆ ಎಂಬ ಜನಪ್ರಿಯ ಹಾಡಿನ ದಾಟಿಯಲ್ಲಿ ಬರೆದಿರುವ ಕಾರಣ ಅದೇ ದಾಟಿಯಲ್ಲಿ ಇದನ್ನು ಹಾಡಬಹುದು).

ಕಲ್ಯಾಣ ಕಿರಣ

ಸಂಪುಟ 33 ಬಸವ ಶಕೆ 870 ಆಜೀವ ಸದಸ್ಯತ್ವ 500 ರೂ.

ಸಂಚಿಕೆ 6 ಜೂನ್ 2003 ವಾರ್ಷಿಕ ಚಂದಾ 50/- ರೂ.

ಲೇಖನಗಳು ಕಿರಣಗನ್ನಡಿ ಲೇಖಕರು ಪುಟ



ದಿ. 30-6-03 ರಂದು ಪರಮ ಪೂಜ್ಯ ಶ್ರೀ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ 9ನೇ ಲಿಂಗೈಕ್ಯ ಸಂಸ್ಮರಣೆ

KALYANA KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ : ಬಸವ ಮಂಟಪ, 2035 20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು [illegible] -560010
ದೂರವಾಣಿ : 3325335/3322790

Digitalized by e-Sahithya Documentation Forum
Sponsored by Sarayu Foundation Trust

ಶರಣ ಸ್ತೋತ್ರಾಷ್ಟಕ

\- ಮಾತಾಜಿ

(ಲಿಂಗದೇವಾಷ್ಟಕದ ದಾಟಿಯಲ್ಲೇ ಹಾಡಬಹುದು)

1. ಶರಣ ಧರ್ಮದಾತ ಶ್ರೀಗುರು ಬಸವ
ಕಾರಣಿಕ ಚೇತನ ಶ್ರೀಗುರು ಬಸವ
ಭಕ್ತೋದ್ಧಾರಕ ಶ್ರೀಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ಶರಣು ಶರಣಾರ್ಥಿ॥

2. ಚಿನ್ಮಯ ಜ್ಞಾನಿ ಚನ್ನಬಸವಣ್ಣ
ಉನ್ನತ ಯೋಗಿ ಚನ್ನಬಸವಣ್ಣ
ಷಟಸ್ಥಲ ಪರಿಣಿತ ಚನ್ನಬಸವಣ್ಣ
ಶರಣೆಂಬೆ ನಾ ಚನ್ನಬಸವಣ್ಣ ॥ಶರಣು ಶರಣಾರ್ಥಿ॥

3. ವ್ಯೋಮಕಾಯ ಸಿದ್ಧ ಶ್ರೀ ಪ್ರಭುದೇವ
ಶೂನ್ಯಪೀಠಾರೋಹಿ ಶ್ರೀ ಪ್ರಭುದೇವ
ಜಂಗಮ ಜ್ಯೋತಿ ಶ್ರೀ ಪ್ರಭುದೇವ
ಶರಣೆಂಬೆ ನಾ ಓಂ ಗುರು ಪ್ರಭುದೇವ ॥ಶರಣು ಶರಣಾರ್ಥಿ॥

4. ಕಾಯಕಯೋಗಿ ಸಿದ್ಧರಾಮೇಶ
ಪರೋಪಕಾರಿ ಸಿದ್ಧರಾಮೇಶ
ಶರಣ ಗಣ ಜ್ಯೋತಿ ಸಿದ್ಧರಾಮೇಶ
ಶರಣೆಂಬೆ ನಾ ಗುರು ಸಿದ್ಧರಾಮ ॥ಶರಣು ಶರಣಾರ್ಥಿ॥

5. ವೀರ ವೀರಾಗಿಣಿ ಅಕ್ಕಮಹಾದೇವಿ
ದಾರ್ಶನಿಕ ಕೋಗಿಲೆ ಅಕ್ಕಮಹಾದೇವಿ
ಸ್ತ್ರೀಕುಲ ಕಣ್ಮಣಿ ಅಕ್ಕಮಹಾದೇವಿ
ಶರಣೆಂಬೆ ನಾ ಅಕ್ಕಮಹಾದೇವಿ ॥ಶರಣು ಶರಣಾರ್ಥಿ॥

6. ಶರಣ ಗಣವೀರ ಶ್ರೀ ಮಾಚಿದೇವ
ಮರಣಭಯ ರಹಿತ ಶ್ರೀ ಮಾಚಿದೇವ
ವಚನ ನಿಧಿ ರಕ್ಷಕ ಶ್ರೀ ಮಾಚಿದೇವ
ಶರಣೆಂಬೆ ನಾ ಗುರು ಮಾಚಿ ತಂದೆ ॥ಶರಣು ಶರಣಾರ್ಥಿ॥

7. ಹುತಾತ್ಮ ಚೇತನ ಶ್ರೀ ಹರಳಯ್ಯ
ಪಾವನ ಮೂರ್ತಿ ಶ್ರೀ ಹರಳಯ್ಯ
ಅರಿವಿನ ಮಾಣಿಕ್ಯ ಶ್ರೀ ಹರಳಯ್ಯ
ಶರಣೆಂಬೆ ನಾ ಹರಳಯ್ಯ ತಂದೆ ॥ಶರಣು ಶರಣಾರ್ಥಿ॥

8. ಧೀರ ಶರಣಮಾತೆ ಅಕ್ಕನಾಗಲಾಂಬಿಕೆ
ಪರಮ ದಾಸೋಹಿ ತಾಯಿ ನೀಲಾಂಬಿಕೆ
ಎಮ್ಮಯ ಬಂಧು ಬಳಗ ಶರಣ ಸಮೂಹ
[illegible] ॥ಶರಣು ಶರಣಾರ್ಥಿ॥

ಹುತಾತ್ಮ ಚೇತನ ಹರಳಯ್ಯನವರ ಮಂಗಲ

ಬೆಳಗಿರಿ ಬೆಳಗಿರಿ ಮಂಗಲದಾರತಿ
ಜಂಗಮ ಜ್ಯೋತಿ ಹರಳಯ್ಯ ಶರಣಗೆ ||
ಬಸವಾದಿ ಪ್ರಮಥರ ಪಥವನು ಹಿಡಿದು
ಕುಸುಮಗಳಾಗಿಸಿ ತನು-ಮನ-ಪ್ರಾಣಗಳ
ಸಮತಾ ತತ್ತ್ವದ ಧ್ವಜವನು ಹಾರಿಸಲು
ಬಲಿದಾನ ಗೈದ ಅಮರ ಚೇತನಕೆ ||1||

ಕಾರ ಜೋಳದ ಪುರದಿ ಜನನವಂ ಹೊಂದಿ
ಕಲ್ಯಾಣ ಪುರದೊಳು ಚಂದದಿ ನೆಲೆಸಿ
ಚಮ್ಮಾವುಗೆ ಹೊಲಿವ ಕಾಯಕವ ಗೈಯುತ್ತ
ಅನುಭವ ಮಂಟಪದ ದಿವ್ಯ ಮಾಣಿಕ್ಯವಾದ ||2||

ಮಡದಿ ಕಲ್ಯಾಣಮ್ಮ ಸುತ ಶೀಲವಂತನೊಡನೆ
ಒಡೆಯ ಬಸವೇಶಗೆ ಶರಣೆಂದು ವಂದಿಸಿ
ಶರಣು ಶರಣಾರ್ಥಿ ಎಂದ ಧರ್ಮಗುರುವಿಗೆ
ತನ್ನೊಡಲ ಚರ್ಮದಿ ಜೋಡುಗೈದ ತ್ಯಾಗಿಗೆ ||3||

ಹಾರುವ ಮಧುವಯ್ಯನವರ ಸುಪುತ್ರಿಯ
ಸುತ ಶೀಲವಂತನಿಗೆ ಮದುವೆಯ ಮಾಡಿಸಿ
ಜಾತಿವಾದಿಗಳಿಂ ಪ್ರಾಣ ತೆತ್ತ ಧೀರ
ಸಚ್ಚಿದಾನಂದ ಸುತ ಪರಂಜ್ಯೋತಿ ಹರಳಯ್ಯ ||4||

- ಮಾತಾಜಿ

ವಿಶ್ವಯಾತ್ರೆಗೆ ಬೀಳ್ಕೊಡುಗೆ

ವಿಶ್ವವ ಸುತ್ತಲು ಹೊರಟಿದೆ ಈಗ
ಕಲ್ಯಾಣ ಜ್ಯೋತಿಯ ಹೊತ್ತಿಸಿ ||ಅ.ಪ||

ಬಸವ ಧರ್ಮದ ಪ್ರಭೆಯನು
ವಿಶ್ವದ ತುಂಬೆಲ್ಲ ಹರಡಲು
ಶರಣರ ತತ್ತ್ವವನು ಮನುಕುಲದ
ಹೃದಯದಿ ಚಿತ್ತಿ ಶಾಂತಿಯ ನೆಲೆಸಲು ||1||

ಧರ್ಮದ ಅರ್ಥವ ಅರ್ಥೈಸಿ
ಅಧ್ಯಾತ್ಮದ ಮರ್ಮವ ತಿಳಿಸಲು
ಜನಾಂಗ ದ್ವೇಷದ ಭೂತವ ಬಿಡಿಸಿ
ಜ್ಞಾನದ ಜ್ಯೋತಿಯ ಹೊತ್ತಿಸಲು ||2||

ಶರಣಮೇಳವೆಂಬ ರಾಶಿಯ ಮಾಡಿ
ಕಲ್ಯಾಣ ಪರ್ವವೆಂಬ ಹಬ್ಬವ ಮಾಡಿ
ಶರಣರೆಲ್ಲರಿಗೆ ಸಂತಸವ ನೀಡಿ
ಮುದದಿಂದ ಮರ್ತ್ಯವ ಬೆಳಗಲು ||3||

ತನು ಮನ ಧನದ ಸೇವೆಯ ಪಡೆದು
ದೀನ ದಲಿತರನ್ನೆಲ್ಲ ಇಂಬಿಟ್ಟುಕೊಂಡು
ಜ್ಞಾನದ ಸುಧೆಯನ್ನು ಸುರಿಸುತ್ತ
ಶರಣರ ಕೀರ್ತಿಯ ಮೆರೆಸಲು ||4||

ಶರಣರ ತತ್ತ್ವವ ಘುಚಿಗೊಳಿಸಿ
ಎತ್ತಿದರು ಸತ್ಯದ ಬಸವ ಪತಾಕೆಯ
ಧೂರ್ತರ ದೂರ ಸರಿಸಿ
ಲೀಲಾ ವಿಶೇಷ ಲಿಂಗದೇವನ ಮೆರೆಸಲು ||5||

ಜಗದ ಭ್ರಾಂತಿ ಅಳಿಸುವ ಮಾತೆಗೆ
ವಿಶ್ವಕ್ಕೆ ಶಾಂತಿ ನೀಡುವ ಜ್ಯೋತಿಗೆ
ಬಸವ ತತ್ತ್ವವೆ ಉಸಿರಾದ ಮಾತೆಗೆ
ನಮಿಸಿ, ಪುನೀತರಾಗೋಣ ಬನ್ನಿ ||6||

ಜನುಮ ಜನುಮದ ಕರ್ಮವ ಕಳೆದು
ಎಲ್ಲರೂ ಕೂಡಿ ಸಂತಸದಿ ಪಾಡಿ
ವಿಶ್ವ ಯಾತ್ರೆಗೆ ಕಳಿಸೋಣ ಬನ್ನಿ
ತನು ಮನ ಧನವನು ಸವೆಸುವ ಬನ್ನಿ ||7||

- ಮಾತೆ ಜ್ಞಾನೇಶ್ವರಿ, ಬಸವ ಮಂಟಪ
ಕಲಬುರ್ಗಿ.

ಕಲ್ಯಾಣ ಕಿರಣ ಮಾಸ ಪತ್ರಿಕೆಯನ್ನು ನಿಮ್ಮ ಸ್ನೇಹಿತರಿಗೆ, ಬಂಧುಗಳಿಗೆ ಉಡುಗೊರೆಯಾಗಿ ಕಳಿಸಿರಿ.

ಕಲ್ಯಾಣ ಪರ್ವಕ್ಕೆ ಪೂಜ್ಯ ಅಪ್ಪಾಜಿಯವರ ಆಗಮನ

- ಮಾತಾಜಿ

ಪ್ರಜಾವಾಣಿ ಪತ್ರಿಕೆಯನ್ನು ಓದುತ್ತಿರುವಾಗ ಒಂದು ದಿನ ಸಿರಿಗೆರೆಯ ಲಿಂಗೈಕ್ಯ ಶ್ರೀಗಳ ಚಿತ್ರವೊಂದು ಪ್ರಕಟವಾಯಿತು. ಅದನ್ನು ನೋಡಿ ಅತೀವ ಆಶ್ಚರ್ಯವಾಯಿತು. ಬಹುಶಃ ಜೊತೆಗೆ ನಿಂತ ವ್ಯಕ್ತಿಯ ಬದುಕಿಗೆ ಸಂಬಂಧಿಸಿ ತೆಗೆದ ಫೋಟೋ ಇರಬಹುದು ಎಂದು ಬರಹವನ್ನು ಓದಿದಾಗ ಅದು ಲಿಂಗೈಕ್ಯ ಶ್ರೀಗಳಲ್ಲ, ಅವರ ಮೂರ್ತಿ ಎಂಬುದು ತಿಳಿಯಿತು. ಅಷ್ಟು ಹೋಲಿಕೆ ಇದ್ದು ಅದು ಜೀವಂತ ವ್ಯಕ್ತಿಯ ಫೋಟೋ ಎನ್ನಿಸುತ್ತಿತ್ತು. ಕಲಾವಿದರ ಅಪೂರ್ವ ಕಲಾ ಪ್ರೌಢಿಮೆ ಕಂಡು ಸಂತೋಷ ಪಡುವುದರ ಜೊತೆಗೆ ಪೂಜ್ಯ ಅಪ್ಪಾಜಿಯವರ ಪ್ರತಿಕೃತಿ ಮಾಡಿಸುವ ವಿಚಾರ ಸಹ ಬಂದಿತು. ಅವರೂ ಸಂತೋಷದಿಂದ ಮಾಡಿಕೊಡಲು ಒಪ್ಪಿದರು. ದಿ. 27-4-2003ರಂದು ಬಸವ ಕಲ್ಯಾಣದಲ್ಲಿದ್ದೆ. ದಾವಣಗೆರೆ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ. ಚಂದ್ರಯ್ಯನವರಿಂದ ಫೋನ್ ಬಂದಿತು. ಗಾಡಿ ಕಳಿಸಿದರೆ ಮೂರ್ತಿಯನ್ನು ಕಳಿಸುವುದಾಗಿ. ತುಂಬಾ ದೂರ. ಬಸವ ಕಲ್ಯಾಣದಲ್ಲಿ ಸಿದ್ಧತಾ ಕೆಲಸ ಬಹಳವಿದ್ದುದರಿಂದ ಎಷ್ಟು ಗಾಡಿಗಳಿದ್ದರೂ ಸಾಕಾಗದು. ಇಂಥ ತುರ್ತು ಸಮಯದಲ್ಲಿ ಗಾಡಿ ಕಳಿಸಿದರೆ ಎರಡು ದಿವಸಗಳ ಕಾಲ ಗಾಡಿ ಬೇರೆ ಸಿಗದಂತಾಗುತ್ತದೆ ಎಂದು ಮನಸ್ಸು ಹೊಯ್ದಾಡಿತು. ಜೊತೆಗೆ ಇನ್ನೊಂದು ಕಳವಳವೂ ಇತ್ತು. ಹಿಂದಿನ ವರ್ಷದ ಗಂಭೀರ ಪ್ರಸಂಗ ನೆನಪಾಗಿ, ಒಂದು ವೇಳೆ ಗಾಡಿ ಅತ್ತ ಹೋದಾಗ ಆರಕ್ಷಕರು 144 ಜಾರಿ ಮಾಡಿದರೆ, ಆಗ ಗಾಡಿಯು ಒಳ ಬರಲಾರದೆ ಎಲ್ಲೋ ನಿಲ್ಲಬೇಕಾಗುವುದು, ಅದರಲ್ಲಿ ಬಂದು ಮೂರ್ತಿಯೂ ಎಲ್ಲೋ ನಿಲ್ಲಬೇಕಾಗುವುದು ಎಂದು ಆತಂಕವೆನಿಸಿ, ಚಂದ್ರಯ್ಯನವರಿಗೆ, ಕಲಾವಿದ ರೇವಣ್ಣನವರಿಗೆ ಫೋನ್ ಮಾಡಿ "ಕಲ್ಯಾಣ ಪರ್ವಕ್ಕೆ ಮೂರ್ತಿಯನ್ನು ತರಿಸಿಕೊಳ್ಳಲು ವ್ಯವಧಾನವಿಲ್ಲ, ನಂತರ ತರಿಸಿಕೊಳ್ಳುತ್ತೇನೆ" ಎಂದು ತಿಳಿಸಿದೆನು.

ದಿ. 28-4-2003ರ ರಾತ್ರಿ ಶರಣೆ. ರೂಪಕಾ ಅವರಿಂದ ಫೋನ್ ಬಂದು ಅವರ ಗಾಡಿಗೆ ಅಪಘಾತವಾಯಿತು ಎಂದು ತಿಳಿದಾಗ ತುಂಬಾ ಕಳವಳವಾಯಿತು. ಹಿರಿಯೂರಿನ ಬಳಿ ಅಪಘಾತವಾಗಿ ಮುಂದಿನ ಗಾಜು ಪೂರ್ಣವಾಗಿ ಒಡೆದಿದೆ ಎಂದು ಹೆಚ್ಚಿನ ಅಪಾಯವಾಗಿಲ್ಲವೆಂದು, ಅದೇ ಸ್ಥಿತಿಯಲ್ಲಿ ಚಿತ್ರದುರ್ಗಕ್ಕೆ ಬರಲಾಗಿದೆ ಎಂದು ತಿಳಿಸಿದರು. ನಾನು ತಕ್ಷಣವೇ ಶರಣ. ಚಿನ್ನಯ್ಯನವರ ಮಗ ಶರಣ. ಮನೋಹರ ಅವರಿಗೆ ಫೋನ್ ಮಾಡಿ, ರೂಪಕಾ ಅವರಿಗೆ ನೆರವು ನೀಡಲು ಹೇಳಿದಾಗ ರಾತ್ರಿ 11-30 ತಕ್ಷಣವೇ ಅವರು ಹೊರಟು ಬಿಟ್ಟರು. ವಸತಿ ವ್ಯವಸ್ಥೆಗೆ ನೆರವಾದರು. ಬೆಳಿಗ್ಗೆ ಏಳುತ್ತಲೇ ರೂಪಕಾ ಅವರು ಅವರ ಕಾರು ಅಷ್ಟು ಬೇಗನೆ ರಿಪೇರಿ ಆಗುವುದಿಲ್ಲವೆಂದು ಬೇರೆ ಬಾಡಿಗೆ ಕಾರು ತರುವುದಾಗಿಯೂ ಹೇಳಿದರು. ಆಗ ನನಗೆ ತಟ್ಟನೆ ಮೂರ್ತಿಯ ನೆನಪಾಗಿ "ಹಾಗಾದರೆ ದೊಡ್ಡ ಗಾಡಿಯನ್ನೇ ಬಾಡಿಗೆ ಮಾಡಿಕೊಂಡು ದಾವಣಗೆರೆಗೆ ಹೋಗಿ ಪೂಜ್ಯರ ಮೂರ್ತಿಯನ್ನು ತಂದು ಬಿಡಿ" ಎಂದೆ. ಅರ್ಧ ಬಾಡಿಗೆ ನಾನು ಕೊಡುವ ವಿಚಾರವಿತ್ತು. ಅವರುಗಳು ಸ್ವೀಕರಿಸಲಿಲ್ಲ, ಒಪ್ಪಲಿಲ್ಲ. ಪೂಜ್ಯರ ಮೂರ್ತಿಯ ಆಗಮನ [illegible]ಟ್ಟಿತು. ಎಲ್ಲರಿಗೂ ಸಂತೋಷವೋ ಸಂತೋಷ.

Digitalized by e-Sahithya Documentation Forum
Sponsored by Sarayu Foundation Trust

ಮೂರ್ತಿಯ ಜೊತೆಗೆ ರೇವಣ್ಣನವರೂ ಬಂದರು. ಅವರನ್ನು ಸತ್ಕರಿಸಿದೆವು.

ಆದರೆ ಈ ಪ್ರಸಂಗ ನಮ್ಮಲ್ಲಿ, ಶರಣೆ. ರೂಪಕಾ ಅವರಲ್ಲಿ, ಅವರ ಸಂಗಡ ಬಂದ ಶರಣ. ವಿಶ್ವೇಶ್ವರಯ್ಯ ಅವರಲ್ಲಿ ಹಲವಾರು ಭಾವನೆಗಳನ್ನು ಹುಟ್ಟಿಸಿತು.

1. ಪೂಜ್ಯ ಅಪ್ಪಾಜಿಯವರ ಚೇತನಕ್ಕೆ ಕಲ್ಯಾಣ ಪರ್ವಕ್ಕೆ ಬರುವ ಹಂಬಲವಿತ್ತೆ ?

2. ನಾನು ಗಾಡಿ ಕಳಿಸಲು ಹಿಂದೆ-ಮುಂದೆ ನೋಡಿದ್ದಕ್ಕೆ ನಮ್ಮಗಳಿಗೆ ಶಿಕ್ಷೆ ಎಂಬಂತೆ ಆ ಮೆಟಾಡೋರ್ ಕಾರಣವೇ ಇಲ್ಲದೆ ಪೋಲೀಸ್ ಸ್ಟೇಷರ್ ಬಳಿ 15 ದಿವಸ ನಿಂತು ಏನೂ ಉಪಯೋಗಕ್ಕೆ ಬರಲಿಲ್ಲ.

3. ಪೂಜ್ಯರು ಲಿಂಗೈಕ್ಯರಾದ ಹಿರಿಯೂರಲ್ಲಿ ಕಾರಿನ ಅಪಘಾತವಾಗಿ, ಯಾರಿಗೂ ಏನೂ ಪೆಟ್ಟಾಗದೆ ರೂಪಕಾ ಅವರು ಬಾಡಿಗೆ ಗಾಡಿಯಲ್ಲಿ ಬರುವಂತಾಗಿ, ಜೊತೆಗೆ ಮೂರ್ತಿಯನ್ನು ದಾವಣಗೆರೆಯಿಂದ ತರುವಂತಾದುದು ವಿವರಣೆಗೆ ನಿಲುಕದ ವಿಲಕ್ಷಣ ಘಟನೆಯಾಗಿ ತೋರಿ ಬರುತ್ತಿದೆ. ಕರ್ಮ ಸಿದ್ಧಾಂತಕ್ಕೆ ಹೊಸ ವ್ಯಾಖ್ಯಾನವಾಗಿ ತೋರಿಬರುತ್ತಲಿದೆ.

ಕಲ್ಯಾಣ ಪರ್ವಕ್ಕೆ ಪೂಜ್ಯ ಲಿಂಗಾನಂದ ಮಹಾಸ್ವಾಮೀಜಿಯವರ ಆಗಮನ

(ಒಂದು ರೋಚಕ ಅನುಭವ)

- ವೀ. ವಿಶ್ವೇಶ್ವರಯ್ಯ, ಬಸವ ಗಂಗೋತ್ರಿ

ದಿನಾಂಕ 28-4-2003ರಂದು ಸಂಜೆ ಅಮೇರಿಕಾದಿಂದ ಬಂದಿದ್ದ ಮಾತೆ ಯೋಗೀಶ್ವರಿ (ಪೂರ್ವಾಶ್ರಮದ ಹೆಸರು ಶರಣೆ. ರೂಪಕಾ ಮಹಾಲಿಂಗಯ್ಯ)ಯವರ ಜೊತೆಯಲ್ಲಿ, ಉತ್ಸಾಹದಿಂದ ಕಲ್ಯಾಣ ಪರ್ವಕ್ಕೆ ಹೊರಟೆವು. ಬೆಂಗಳೂರು ಬಿಡುವ ಮುನ್ನ ಬಸವ ಮಂಟಪಕ್ಕೆ ಹೋಗಿ ಅಲ್ಲಿ ಜಯಬಸವರಾಜ ಮಂಗಲಘೋಷ ಮುಗಿಸಿಕೊಂಡು ಪ್ರಯಾಣ ಬೆಳೆಸಿದೆವು. ಸುಮಾರು ರಾತ್ರಿ 9 ಗಂಟೆ ಸಮಯ. ಹಿರಿಯೂರಿನ ಬಳಿ ನಮ್ಮ ಕಾರು ಅನಿರೀಕ್ಷಿತವಾಗಿ ಅಪಘಾತಕ್ಕೆ ಒಳಗಾಯಿತು. ಮುಂದೆ ಹೋಗುತ್ತಿದ್ದ ಲಾರಿಯೊಂದು ಯಾವುದೇ ಮುನ್ಸೂಚನೆಯಿಲ್ಲದೆ ಬ್ರೇಕ್ ಹಾಕಿದ್ದರಿಂದ ಈ ಅಪಘಾತ ಸಂಭವಿಸಿತು. ಅಪಘಾತಕ್ಕೆ ಕಾರಣವಾದ ಲಾರಿ ನಿಲ್ಲದೆ ಪಾರಾಯಿತು. ಮುಂದೆ ಕುಳಿತಿದ್ದ ನನಗೆ ಮತ್ತು ಚಾಲಕನಿಗೆ ಮುಖ ಕೈಗಳಿಗೆ ಸಣ್ಣಪುಟ್ಟ ಗಾಯಗಳಾದವು. ಕಾರಿನ ಮುಂದಿನ ಗಾಜು ಒಡೆದು ಚೂರಾಯಿತು. ಹಿಂದೆ ಕುಳಿತಿದ್ದ ಯೋಗೀಶ್ವರಿಯವರಿಗೆ ಯಾವುದೇ ತೊಂದರೆಯಾಗಲಿಲ್ಲ. ಅಂತೂ ಬಸವ ಕೃಪೆಯಿಂದ ಆಗಬೇಕಿದ್ದ ದೊಡ್ಡ ಅನಾಹುತ ತಪ್ಪಿತು.

ಅಪಘಾತದಿಂದ ವಿಚಲಿತರಾದ ನಾವು ಮುಂದೇನು ಮಾಡಬೇಕೆಂಬ ಚಿಂತೆಯಲ್ಲಿದ್ದಾಗ, ಅಲ್ಲಿಯೇ ಸುತ್ತ ಮುತ್ತಲಿದ್ದ, ತಮಿಳು ಮಾತನಾಡುತ್ತಿದ್ದ 5-6 ಜನರು ಸ್ವಯಂ ಪ್ರೇರಣೆಯಿಂದ ಬಂದು ಒಡೆದಿದ್ದ ವಿಂಡ್ ಸೀಲ್ಡ್ ಗ್ಲಾಸ್ ಚೂರುಗಳನ್ನು ತೆಗೆದು ಕಾರನ್ನು ಸ್ವಚ್ಛಗೊಳಿಸಿದರು.

ಅವರ ಸದ್ವರ್ತನೆಗೆ ಸಂತೋಷಪಟ್ಟು ಹಣ ಕೊಡಲು ಮುಂದಾದಾಗ ಅವರು ನಿರಾಕರಿಸಿ, ಮಾನವೀಯತೆಯಿಂದ ಸಹಾಯ ಮಾಡಿದ್ದಾಗಿ ತಿಳಿಸಿದರು. ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿ ನಾವು ಅದೇ ಸ್ಥಿತಿಯಲ್ಲಿ ಚಿತ್ರದುರ್ಗದ ಕಡೆ ಪ್ರಯಾಣ ಮುಂದುವರೆಸಿದೆವು. ಹಾದಿ ಮಧ್ಯದಲ್ಲಿ ಮಾತೆ ಯೋಗೀಶ್ವರಿಯವರು ಬಸವ ಕಲ್ಯಾಣದಲ್ಲಿದ್ದ ಪೂಜ್ಯ ಮಾತಾಜಿಯವರಿಗೆ ಅಪಘಾತದ ಸುದ್ದಿಯನ್ನು, ದೂರವಾಣಿ ಮೂಲಕ ತಿಳಿಸಿದರು. ತಕ್ಷಣವೇ ಶರಣ. ಚನ್ನಯ್ಯನವರ ಮಗ ಶರಣ. ಮನೋಹರ್ ಅವರಿಗೆ ಪೂಜ್ಯ ಮಾತಾಜಿ ಸಂದೇಶ ಕಳಿಸಿದ್ದಾರೆ.

ನಾವು ಚಿತ್ರದುರ್ಗ ತಲುಪುವುದರೊಳಗೆ ಮನೋಹರ್ ಶರಣರು ಬಂದು ನಮ್ಮ ಕುಶಲ ವಿಚಾರಿಸಿ ಉಳಿದುಕೊಳ್ಳಲು ರೂಮಿನ ವ್ಯವಸ್ಥೆಯೊಂದಿಗೆ ವೈದ್ಯರಿಂದ ಚಿಕಿತ್ಸೆಯನ್ನು ಕೊಡಿಸಿದರು. ಅಂದು ರಾತ್ರಿ ವಿಶ್ರಾಂತಿ ಪಡೆದು, ಬೆಳಿಗ್ಗೆ ಸ್ನಾನ ಪೂಜೆ ಮುಗಿಸಿ ಮುಂದೇನು ಮಾಡುವುದೆಂಬ ತೊಳಲಾಟದಲ್ಲಿದ್ದಾಗ ಪೂಜ್ಯ ಮಾತಾಜಿಯವರಿಂದ ಮೊಬೈಲ್‌ಗೆ ಫೋನ್ ಕರೆ ಬಂತು. ಫೋನಿನಲ್ಲಿ ಪೂಜ್ಯ ಮಾತಾಜಿಯವರು ಅಪಘಾತಕ್ಕೀಡಾಗಿದ್ದ ಕಾರನ್ನು ರಿಪೇರಿಗೆ ಬಿಟ್ಟು ಬೇರೆ ಗಾಡಿ ಮಾಡಿಕೊಂಡು ದಾವಣಗೆರೆಗೆ ಹೋಗಿ, ಅಲ್ಲಿ ಸಿದ್ಧವಾಗಿರುವ ಪೂಜ್ಯ ಅಪ್ಪಾಜಿಯವರ ಪುತ್ಥಳಿಯನ್ನು ತೆಗೆದುಕೊಂಡು ಬಸವ ಕಲ್ಯಾಣಕ್ಕೆ ಬರಬೇಕೆಂದು ಸೂಚಿಸಿದರು. ಇದಕ್ಕೆ ಮೊದಲು ಇಬ್ಬರ ಪ್ರಯಾಣಕ್ಕೆ ಸಾಕೆಂದು ಬಂದು ಚಿಕ್ಕ ಕಾರನ್ನು ಹುಡುಕಿಸಿದಾಗ ಸಿಗಲಿಲ್ಲ ಎಂಬುದು ಗಮನಾರ್ಹ ಮತ್ತು ನಾವು ಪ್ರಯಾಣ ಮಾಡಿ ಬಂದಿದ್ದ ಕಾರಿನಲ್ಲಿಯೂ ಪುತ್ಥಳಿ ಇಡಲು ಆಗುತ್ತಿರಲಿಲ್ಲ ಎಂಬುದು ಒಂದು ವಿಶೇಷ. ಪೂಜ್ಯ ಮಾತಾಜಿಯವರ ಸೂಚನೆಯಂತೆ ಬೇರೆ ದೊಡ್ಡ ಕ್ವಾಲಿಸ್ ಕಾರನ್ನು ತೆಗೆದುಕೊಂಡು ದಾವಣಗೆರೆಗೆ ಹೋದೆವು. ಅಲ್ಲಿ ಶಿಲ್ಪಿ ರೇವಣ್ಣನವರಿಂದ ನಿರ್ಮಾಣಗೊಂಡಿದ್ದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ಪುತ್ಥಳಿಯನ್ನು ನೋಡಿ ನಾವೆಲ್ಲ ಸ್ತಂಭೀಭೂತರಾದೆವು. ಬೆರಗಿನೊಂದಿಗೆ ರೋಮಾಂಚನವೂ ಆಯಿತು. ಏಕೆಂದರೆ ನಾನೆಂದೂ ಅವರ ಜೀವಿತಾವಧಿಯಲ್ಲಿ ದರ್ಶನ ಭಾಗ್ಯ ಪಡೆದು ಬಂದಿರಲಿಲ್ಲ. ಆದರೆ ಇಲ್ಲಿ ಹಸನ್ಮುಖ ಭಾವದಿಂದ ಪ್ರವಚನ ಮಾಡುವ ಶೈಲಿಯ ದಿವ್ಯ ತೇಜಸ್ಸಿನ ಮಂಗಳ ಮೂರ್ತಿಯನ್ನು ನೋಡಿ ನಮಗೆ ಆತ್ಮಾನಂದವಾಯಿತಷ್ಟೇ ಅಲ್ಲ ಮಂತ್ರ ಮುಗ್ಧರೂ ಆದೆವು. ಪುತ್ಥಳಿಯನ್ನು ವಾಹನದ ಮುಂಭಾಗದ ಅಂದರೆ ಚಾಲಕನ ಪಕ್ಕದಲ್ಲೆ ಕೂರಿಸಿಕೊಂಡು ಅದರ ರಕ್ಷಣೆಗೆಂದು ಬೆಲ್ಟ್ ಬಿಗಿದು ಜತೆಗೆ ಶಿಲ್ಪಿ ರೇವಣ್ಣನವರನ್ನು ಕರೆದುಕೊಂಡು ಪ್ರಯಾಣವನ್ನು ಮುಂದುವರೆಸಿದೆವು. ಆದರೆ ಮುಂದೆ ಆದುದೇನು ?! ಈ ದೃಶ್ಯ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಸಾಕ್ಷಾತ್ ಸ್ವಾಮಿಗಳೇ ಪ್ರಯಾಣ ಮಾಡುತ್ತಿದ್ದಾರೆಂದು ಭಾವಿಸಿದ ರಸ್ತೆ ಬದಿಯ ಜನ ಭಕ್ತಿ ಪರವಶತೆಯಿಂದ ಕೈಮುಗಿಯುತ್ತಿದ್ದುದನ್ನು ಕಂಡು ನಮಗಂತೂ ಆನಂದ-ಆಶ್ಚರ್ಯಗಳ ಸಮುದ್ರ, ಮಾತ್ರವಲ್ಲ ಮುಂದೆ ಎನ್.ಎಚ್. 13ರ ಹೆದ್ದಾರಿಯಲ್ಲಿ ಒಂದೆಡೆ ವಾಹನಗಳಿಂದ ರಸ್ತೆ ಬ್ಲಾಕ್ ಆಗಿತ್ತು. ಅದೇ ರೀತಿ ನಮ್ಮ ಕಾರು ಲಾರಿಗಳ ಸಾಲಿನ ಹಿಂದೆ ಹೋಗಿ ನಿಂತಿತು. ವಾಹನಗಳ ಹಿಂದನ್ನು ಕ್ರಮಬದ್ಧವಾಗಿ ನಿಯಂತ್ರಿಸುತ್ತಿದ್ದ ಆರಕ್ಷಕ ಇಲಾಖೆಯ ಅಧಿಕಾರಿಗಳ ಕಣ್ಣಿಗೆ ಪೂಜ್ಯ ಶ್ರೀ ಸ್ವಾಮೀಜಿಯವರು ಕುಳಿತಿದ್ದುದು ಕಂಡುಬಂದಿತು.

Digitalized by e-Sahithya Documentation Forum
Sponsored by Sarayu Foundation Trust

ಭಕ್ತಿವಂತರಾದ ಆ ಅಧಿಕಾರಿಗಳು ಅಲ್ಲಿಯೇ ದೀರ್ಘದಂಡ ಪ್ರಣಾಮಗಳನ್ನು ಸಲ್ಲಿಸಿದ್ದು ಮಾತ್ರವಲ್ಲದೆ ದಾರಿಗಾಗಿ ನಿಂತಿದ್ದ ಉಳಿದ ಗಾಡಿಗಳನ್ನು ಬದಿಗೆ ಸರಿಸಿ ನಮ್ಮ ಕಾರಿಗೆ ಮೊದಲು ದಾರಿ ಮಾಡಿಕೊಟ್ಟು, ಶಿಸ್ತಿನಿಂದ ಗೌರವ ಪೂರ್ವಕವಾಗಿ, ಸೆಲ್ಯೂಟ್ ಹೊಡೆದು ರಾಜ ಮರ್ಯಾದೆಯೊಂದಿಗೆ ನಮ್ಮನ್ನು ಕಳಿಸಿ ಕೊಟ್ಟರು. ಬಹಳ ಹೊತ್ತಿನಿಂದ ತಮ್ಮ ಸರದಿಗಾಗಿ ಕಾಯುತ್ತಾ ಬಸವಳಿದಿದ್ದ ಇತರ ವಾಹನ ಚಾಲಕರಿಗೆ ಇದರಿಂದ ಅಸೂಯೆ ಬಂದಿರಲಿಕ್ಕೂ ಸಾಕು.

ಅಲ್ಲಿಂದ ಮುಂದೆ ಬಸವೈಕ್ಯ ಕ್ಷೇತ್ರ ಕೂಡಲ ಸಂಗಮಕ್ಕೆ ಹೋಗಿ ಐಕ್ಯ ಮಂಟಪದಲ್ಲಿ ಗುರು ಬಸವಣ್ಣನವರ ದರ್ಶನ ಪಡೆದು ರಾತ್ರಿ 4 ಗಂಟೆಗೆ ಮಹಾಮನೆಗೆ ಹೋದೆವು. ಅಲ್ಲಿ ಪೂಜ್ಯ ಶ್ರೀ ಅಕ್ಕಮಹಾದೇವಿ ಮಾತೆಯವರ ಆತಿಥ್ಯವನ್ನು ಸ್ವೀಕರಿಸಿದೆವು. ಅಲ್ಲಿ ಎಲ್ಲಾ ಸಾಧಕ/ಸಾಧಕಿಯರು ಸ್ವಾಮೀಜಿಯವರ ದರ್ಶನ ಪಡೆದು ಸಂತೋಷ ಪಟ್ಟರು. ಶರಣಲೋಕ ಮತ್ತು ಗಣಲಿಂಗ ದರ್ಶನ ಮಾಡಿಕೊಂಡು ಪ್ರಯಾಣ ಮುಂದುವರಿಸಿದೆವು.

30ನೇ ತಾರೀಖು ಮುಂಜಾನೆ 6 ಗಂಟೆಗೆ ಬಸವ ಕಲ್ಯಾಣದ ಮಹಾಮನೆಯನ್ನು ತಲುಪಿ ಪೂಜ್ಯ ಮಾತಾಜಿಯವರ ದರ್ಶನ ಮತ್ತು ಆಶೀರ್ವಾದ ಪಡೆದೆವು. ಪುತ್ಥಳಿಯನ್ನು ವೇದಿಕೆಯ ಮೇಲೆ ಗೌನ್ ಹಾಕಿ ಇಡಲಾಯಿತು. ಬೆಳಿಗ್ಗೆ 10-30ಕ್ಕೆ ಕಲ್ಯಾಣ ಪರ್ವದ ಉದ್ಘಾಟನಾ ಸಮಾರಂಭ ಗುರು ಬಸವಣ್ಣನವರ ಪೂಜೆಯೊಂದಿಗೆ ಪ್ರಾರಂಭವಾಯಿತು. ಮಂತ್ರನಾದದೊಂದಿಗೆ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ಪುತ್ಥಳಿಯು ಅನಾವರಣವಾಗುತ್ತಿದ್ದಂತೆ ಸಭಾಂಗಣದಲ್ಲಿದ್ದ ಶರಣ ಬಂಧುಗಳಿಂದ ಮುಗಿಲು ಮುಟ್ಟುವಂತೆ ದೀರ್ಘಾವಧಿಯ ಕರತಾಡನ, ಹರ್ಷೋದ್ಗಾರ, ಜಯ ಘೋಷಗಳೊಂದಿಗೆ ತುಂಬಿತುಳುಕಿತು. ಅದೇ ಸಮಯದಲ್ಲಿ 10 ನಿಮಿಷಗಳ ಕಾಲ ಸ್ವಾಮೀಜಿಯವರ ಪ್ರವಚನದ ಧ್ವನಿ ಸುರುಳಿಯನ್ನು ಹಾಕಲಾಯಿತು. ಇದರಿಂದ ಪೂಜ್ಯ ಸ್ವಾಮೀಜಿಯವರು ವೇದಿಕೆಯ ಮೇಲೆ ಜೀವಂತವಾಗಿ ಕುಳಿತು ಪ್ರವಚನ ಮಾಡುತ್ತಿದ್ದ ದಿವ್ಯ ಅನುಭವವಾಯಿತು. ಸಭೆಯಲ್ಲಿ ಮಿಂಚಿನ ಸಂಚಾರವಾಯಿತು. ಒಟ್ಟಿನಲ್ಲಿ ಈ ಪುತ್ಥಳಿಯು ಇಡೀ ಕಲ್ಯಾಣ ಪರ್ವದ ಮುಖ್ಯ ಆಕರ್ಷಣೆಯಾಗಿ ಅನೇಕ ಶರಣರಿಗೆ ದರ್ಶನ ಭಾಗ್ಯ ದೊರಕಿಸಿತು.

ಮೇಲಿನ ಅನಿರೀಕ್ಷಿತ-ಅನಪೇಕ್ಷಿತ (ಅಪಘಾತದ) ಘಟನೆಗಳನ್ನು ಮೆಲುಕು ಹಾಕಿದಾಗ ಯಾವುದೋ ಒಂದು ಕಾರಣ ಸಂಬಂಧದಿಂದ ಕೂಡಿದ ಅಗೋಚರ ಶಕ್ತಿಯೊಂದರ ಪೂರ್ವ ನಿಯೋಜಿತ ಸಂಕಲ್ಪದಂತೆ ಇದೆಲ್ಲ ಆಗಿದೆಯೇನೋ ಎಂದೆನಿಸುತ್ತದೆ. ಏಕೆಂದರೆ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು ಶರೀರ ತ್ಯಾಗ ಮಾಡಿದ್ದು ಹಿರಿಯೂರಿನಲ್ಲಿ. ನಮ್ಮ ಕಾರಿಗೆ ಅಪಘಾತವಾಗಿದ್ದು ಹಿರಿಯೂರಿನಲ್ಲಿ. ಈ ಘಟನೆಗಳ ವಿವರವನ್ನು ಆಲಿಸಿದ ನಮ್ಮೆಲ್ಲರ ಆತ್ಮೀಯ ಶರಣೆ ಸುಜಯಾ ತಾಯಿಯವರು ಉದ್ಗರಿಸಿದ್ದು ಹೀಗೆ "ನೋಡಿ, ಕಲ್ಯಾಣ ಪರ್ವಕ್ಕೆ 12 ಜ್ಯೋತಿಗಳು ಹೋಗುತ್ತಿವೆ. ಇವರೊಂದಿಗೆ ಪೂಜ್ಯ ಅಪ್ಪಾಜಿಯವರು ಹೋಗದಿದ್ದರೆ ಹೇಗೆ ? ಅದಕ್ಕೆ ಇಷ್ಟೆಲ್ಲ ಆಗಿದೆ "ಎಂದು. ತಾನೊಂದು [illegible]

ಮಾತಿನ ಅನುಭವ ನಮಗೆಂದು ಆಯಿತು. ಇದುವರೆಕ್ಕೆ ಸಲ್ಲುವಂತೆ ಬಾಳಿ ಬದುಕಿದ ದಿವ್ಯ ಚೇತನ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ಸ್ಮರಣೆಯೊಂದಿಗೆ ಈ ಲೇಖನಕ್ಕೆ ಪೂರ್ಣವಿರಾಮ ಹಾಕುತ್ತೇನೆ.

★★

ಬಸವಣ್ಣನವರೇ ಲಿಂಗಾಯತ ಧರ್ಮದ ಆದಿಯಾಧಾರ

- ಮ. ಜಯದೇ ವ

ಹಗಲೆನ್ನೆ, ಇರುಳೆನ್ನೆ, ಉದಯವೆನ್ನೆ, ಅಸ್ತಮಾನವೆನ್ನೆ;
ಹಿಂದೆನ್ನೆ, ಮುಂದೆನ್ನೆ, ನೀನಲ್ಲದೆ ಪೆರತೊಂದಹುದೆನ್ನೆ:
ಮನ ಘನವಾದುದಿಲ್ಲಯ್ಯ!
ಕತ್ತಲೆಯಲ್ಲಿ, ಕನ್ನಡಿಯ ನೋಡಿ ಕಳವಳಗೊಂಡೆನಯ್ಯಾ!
ಬಸವಣ್ಣನ ತೇಜದೊಳಗಲ್ಲದೆ ನಾ ನಿನ್ನನೆಂತು ಕಾಂಬೆನು
ಹೇಳಾ ಚನ್ನಮಲ್ಲಿಕಾರ್ಜುನಾ ॥

- ಜಗನ್ಮಾತಾ ಅಕ್ಕಮಹಾದೇವಿ

ಘನ ಮನವಾದ ಶಿವಯೋಗಿಯು ಲಿಂಗಯೋಗದಿಂದ ತನ್ನ ತಾ ಮರೆದು ತನ್ಮಯವಾದ ಸ್ಥಿತಿಯನ್ನು ಮಹಾದೇವಿಯಕ್ಕನು ಸೊಗಸಾಗಿ ಇಲ್ಲಿ ಚಿತ್ರಿಸಿದ್ದಾಳೆ. ಜ್ಞಾನದ ಬೆಳಗೆನ್ನಲಾಗದು, ಅಜ್ಞಾನದ ಇರುಳು ಎನ್ನಲಾಗದು, ಹುಟ್ಟಿದುದು ಎನ್ನಲಾಗದು, ಅಳಿದುದೆನ್ನಲಾಗದು, ಹಿಂದೆ ಇತ್ತು ಮುಂದೆ ಇಲ್ಲ ಎಂದೂ ಹೇಳಲಾಗದು. ಆ ಪರವಸ್ತುವನ್ನುಳಿದು ಬೇರೊಂದಿದೆ ಎಂದು ಹೇಳಲಿಕ್ಕಾಗದು. ಕತ್ತಲೆಯಲ್ಲಿ ಕನ್ನಡಿಯನ್ನು ನೋಡಿ ತನ್ನ ರೂಪ ಕಾಣದೆ ಹೇಗೆ ಕಳವಳಗೊಳ್ಳುತ್ತೇವೋ ಹಾಗೆ ನಮ್ಮ ರೂಪು ನಮಗೆ ಕನ್ನಡಿಯಲ್ಲಿ ಕಾಣಬೇಕಾದರೆ ನಮ್ಮ ಕಣ್ಣು ಬೆಳಗುತ್ತಿರಬೇಕು, (ಕುರುಡಾಗಿರಬಾರದು) ಹಾಗೂ ಸೂರ್ಯನ ಅಥವಾ ದೀಪದ ಬೆಳಕಿರಬೇಕು. ಹಾಗೆಯೇ ಸ್ವರೂಪ (ಆತ್ಮ) ಸಾಕ್ಷಾತ್ಕಾರವಾಗಬೇಕಾದರೆ, ಆ ಲಿಂಗಾನಂದದ ನಿಬ್ಬೆರಗಿನಲ್ಲಿ ನಿಲ್ಲಬೇಕಾದರೂ ನಮಲ್ಲಿ ಭಕ್ತಿ ಎಂಬ ಬೆಳಕು ಇರಬೇಕು, ಕೇವಲ ಭಕ್ತಿ ಬೆಳಕೊಂದಿದ್ದರೆ ಸಾಲದು. ಬಸವ ಭಾಸ್ಕರನ ಅನುಗ್ರಹದ ತೇಜವೂ ಬೇಕು. ಇಲ್ಲವಾದರೆ ಲಿಂಗತೇಜದ ಕೂಟ ಸಾಧ್ಯವೇ ಇಲ್ಲವೆಂದು ಅಕ್ಕ ಹೇಳುತ್ತಾಳೆ.

ಲಿಂಗಾಯತ ಧರ್ಮದಲ್ಲಿ ಧರ್ಮಾನುಯಾಯಿಗೆ ಧರ್ಮಪಿತ ಬಸವಣ್ಣನವರ ಅನುಗ್ರಹಬೇಕೇ ಬೇಕು. ಇಲ್ಲವಾದರೆ ಲಿಂಗಾಂಗ ಸಾಮರಸ್ಯವು ಸಿದ್ಧಿಸುವುದಿಲ್ಲ, ಕತ್ತಲೆಯಲ್ಲಿ ಕನ್ನಡಿಯನ್ನು ಎಷ್ಟು ಕಾಲ ನೋಡಿದರೂ ಹೇಗೆ ಪ್ರಯೋಜನವಿಲ್ಲವೋ ಹಾಗೆ ಆಗುತ್ತದೆ. ವೃಥಾ ಪರಿಶ್ರಮ ! ಎಳ್ಳಿಲ್ಲದ ಗಾಣವನಾಡಿದ ಎತ್ತಿನ ಪರಿಸ್ಥಿತಿಯಾಗುತ್ತದೆ. ಆದುದರಿಂದಲೇ ಮಡಿವಾಳ [illegible] ಮಜ್ಜನಕ್ಕೆರೆಯದವನ ಭಕ್ತಿ ಶೂನ್ಯ ಕಾಣಾ

Digitalized by e-Sahithya Documentation Forum
Sponsored by Sarayu Foundation Trust

ಶಿವದೇವರದೇವಾ" ಎಂದು ಬಸವ ಸ್ಮರಣೆಯಿಲ್ಲದ ಲಿಂಗಪೂಜೆ ವ್ಯರ್ಥವೆಂದು ಹೇಳಿರುವುದು. ನಿರಾಕಾರ ಲಿಂಗದೇವನ ಸಾಕಾರ ಪ್ರತಿನಿಧಿಯೇ ಬಸವಣ್ಣನವರು, ಎಂತಲೇ ಪ್ರಭುದೇವರು, 'ಮರ್ತ್ಯಲೋಕ-ಶಿವಲೋಕವೆರಡಕ್ಕೂ ನಿಚ್ಚಣಿಗೆಯಾದೆಯಲ್ಲಾ ಬಸವ' ಹಾಗೂ 'ನಮ್ಮ ಗುಹೇಶ್ವರ ಲಿಂಗಕ್ಕೆ ವಿಳಾಸವಾದೆಯಲ್ಲಾ ಸಂಗನ ಬಸವಣ್ಣಾ' ಎಂದೂ ಸ್ತುತಿಸಿರುವುದು.

ಕೆಲವು ಸ್ವಾಮಿಗಳು ಹೀಗೆ ಹೇಳುತ್ತಾರೆ. (ಇತ್ತೀಚೆಗೆ ನಮ್ಮ ಊರಿಗೂ ಒಬ್ಬರು ಸ್ವಾಮಿಗಳು ಬಂದಿದ್ದರು. ಅವರು ಹೀಗೆ ಹೇಳುತ್ತಿದ್ದರು) ಈ ಧರ್ಮ ಅತೀ ಪ್ರಾಚೀನವಾದುದು, ಆದರೆ ಈಗ ಕೆಲವರು ಈ ಧರ್ಮವನ್ನು ವ್ಯಕ್ತಿ ಪ್ರಧಾನವಾಗಿ ಮಾಡ ಹೊರಟಿರುವುದು ದುರದೃಷ್ಟ ಎಂದು. ಎಲ್ಲಾ ಪ್ರವಾದಿ ಧರ್ಮಗಳು ಒಬ್ಬೊಬ್ಬ ವ್ಯಕ್ತಿಗಳಿಂದಲೇ ಹುಟ್ಟಿರುವುದೆಂಬುದು ಸ್ಪಷ್ಟವೇ ಇದೆ. ಬಸವಣ್ಣನ ಎಂಬ ಮಹಾಗುರುವಿನಿಂದ ಈ ಲಿಂಗವಂತ ಧರ್ಮ ಹುಟ್ಟಿರುವುದು. ನಮಗೆ ವಚನ ಸಾಹಿತ್ಯದ ಆಧಾರದಿಂದ ಬಲಗೊಳ್ಳುತ್ತದೆ. ಇದಕ್ಕೊಂದು ಸುಂದರ ಉದಾಹರಣೆ: ಒಮ್ಮೆ ಅಕ್ಬರ್ ಬಾದ್‌ಷಹ ಚೈನಾ ದೇಶದ ದೊರೆಗೆ ಬಿರ್‌ಬಲ್ಲನ ಕೈಯಲ್ಲಿ ಒಂದು ಸಂದೇಶವನ್ನು ತಲುಪಿಸಲಿಕ್ಕೆ ಲಕೋಟೆಯೊಂದನ್ನು ಕೊಟ್ಟು ಕಳುಹಿಸಿರುತ್ತಾನೆ. ಬಿರ್‌ಬಲ್ಲನ ಚತುರಮತಿಯನ್ನು, ಬುದ್ಧಿವಂತಿಕೆಯನ್ನು ಹಾಗೂ ನಗೆಯ ಕೌಶಲ್ಯತೆಗಳೆಲ್ಲವನ್ನು ಕರ್ಣಾಕರ್ಣಿಕೆಯಾಗಿ ಬಲ್ಲಂತಹ ಚೈನಾ ದೇಶದ ದೊರೆಯು ಬಿರ್‌ಬಲ್ಲನನ್ನು ಪೇಚಿಗೆ ಸಿಲುಕಿಸಿ ಬೇಸ್ತು ಬೀಳಿಸಬೇಕೆಂದು ಒಂದು ಪರೀಕ್ಷೆಯನ್ನೊಡ್ಡುವನು. ಅದೆಂದರೆ, ತನ್ನ ಆಸ್ಥಾನದಲ್ಲಿ ತನ್ನಂತೆಯೇ ಹೋಲುವ ಐದಾರು ಜನರನ್ನು ಆರಿಸಿ ದೊರೆಯ ವೇಷ ಭೂಷಣಗಳನ್ನೇ ಅವರಿಗೂ ತೊಡಿಸಿ, ತಾನು ಕೂಡುವಂತಹುದೇ ಸಿಂಹಾಸನಗಳನ್ನು ಅವರಿಗೂ ಹಾಕಿಸಿ ಆಸ್ಥಾನದಲ್ಲಿ ತನ್ನೊಡನೆಯೇ ಅವರನ್ನು ಕೂಡಿಸಿ ಓಲಗ ನಡೆಸುತ್ತಿರುತ್ತಾನೆ. ಆ ಸಭೆಯಲ್ಲಿ ನಿಜವಾದ ದೊರೆ ಯಾರೆಂಬುದನ್ನು ಕಂಡು ಹಿಡಿದು ಬಿರ್‌ಬಲ್ಲನು ಅಕ್ಬರ್ ಬಾದ್‌ಷಹನ ಸಂದೇಶದ ಲಕೋಟೆಯನ್ನು ತಲುಪಿಸಬೇಕೆಂಬುದೇ ಪರೀಕ್ಷೆ. ಬಿರ್‌ಬಲ್ಲನು ಆಸ್ಥಾನಕ್ಕೆ ಬಂದು ನೋಡುತ್ತಾನೆ. ಸಭೆಯಲ್ಲಿ ಐದಾರು ಮಂದಿ ದೊರೆಯ ವೇಷಭೂಷಣಗಳಲ್ಲಿ ವಿರಾಜಮಾನರಾಗಿದ್ದಾರೆ. ಬಿರ್‌ಬಲ್ಲನಿಗೆ ಅರಿವಾಯಿತು ಇದು ತನ್ನ ಸತ್ವ ಪರೀಕ್ಷೆ ! ಗಂಭೀರವಾಗಿ ತದೇಕ ಚಿತ್ತದಿಂದ ಆ ಸಭೆಯನ್ನು ನೋಡಿ ಪರೀಕ್ಷಿಸಿ ಸೀದಾ ನಿಜವಾದ ದೊರೆಯಲ್ಲಿಗೆ ಹೋಗಿ ಆ ಪತ್ರವನ್ನು ನೀಡುವನು. ದೊರೆಗೆ ಆಶ್ಚರ್ಯವಾಗಿ ಹೇಗೆ ನೀನು ನನ್ನನ್ನು ಕಂಡುಹಿಡಿದೆ ಎಂದು ಪ್ರಶ್ನಿಸುವನು. ಆಗ ಬೀರಬಲ್ಲನು ಭಿನ್ನವಿಸಿಕೊಳ್ಳುತ್ತಾನೆ, 'ಬಹಳ ಸುಲಭ ಪ್ರಭು. ನಿಮ್ಮನ್ನುಳಿದು ಉಳಿದವರೆಲ್ಲ, ವೇಷ ಭೂಷಣಗಳಿಂದ ನಿಮ್ಮಂತೆಯೇ ಇದ್ದರೂ ನಿಮ್ಮ ಗಾಂಭೀರ್ಯ ಅವರುಗಳಲ್ಲಿಲ್ಲ. ಮತ್ತೆ ಮತ್ತೆ ಅವರು ನನ್ನನ್ನು, ಸಭೆಯನ್ನು ಹಾಗೂ ನಿಮ್ಮನ್ನು ನೋಡುತ್ತಿದ್ದರು. ತಾವು ಮಾತ್ರ, ಗಂಭೀರವಾಗಿ ದೊರೆಯ ರೀವಿಯಿಂದ ಕುಳಿತಿದ್ದೀರಿ. ಹಾಗೂ ಸಭೆಯಲ್ಲಿದ್ದವರೆಲ್ಲರ ದೃಷ್ಟಿಯೂ ನಿಮ್ಮೊಬ್ಬರ ಮೇಲೆಯೇ ಇತ್ತು ! ಇದರಿಂದ ನನಗೆ ನೀವೇ ದೊರೆಯೆಂಬುದು ತಿಳಿಯಿತು' ಎಂದು ನುಡಿದ. ಇದು ಒಂದು ದೃಷ್ಟಾಂತ. ಇದರ ದ್ರಾಷ್ಟಾಂತವೆಂದರೆ ಲಿಂಗವಂತಧರ್ಮದ ಆದ್ಯರೂ ಮೂಲ ಗುರುವೂ, ಧರ್ಮಕರ್ತರೂ, ಧರ್ಮಪಿತರೂ ಯಾರೆಂಬುದು ಕಂಡುಹಿಡಿಯಲು

ಕಷ್ಟಪಡಬೇಕೇನು ಇಲ್ಲ, ಅದು ಬಹಳ ಸುಲಭ ! ಎಲ್ಲಾ ಶರಣರ ವಚನಗಳನ್ನು ನಾವು ಅವಲೋಕಿಸಿದರೆ ವಿಶ್ವಗುರು, ಮಂತ್ರಪುರುಷ ಬಸವಣ್ಣನವರೇ ಈ ಲಿಂಗವಂತ ಧರ್ಮದ ಮೂಲರೆಂಬುದು ನಮಗೆ ಸ್ಪಷ್ಟವಾಗುತ್ತದೆ.

ಹೇಗೆ ಆಸ್ಥಾನದಲ್ಲಿ ಎಲ್ಲರ ದೃಷ್ಟಿ ನಿಜವಾದ ದೊರೆಯ ಮೇಲಿತ್ತೋ ಹಾಗೆ ಎಲ್ಲಾ ಆದಿಶರಣರ ವಚನಗಳೂ ಗುರು ಬಸವಣ್ಣನವರೆ ಆದಿಗುರುವೆಂದು ತಿಳಿಸುತ್ತಿರುವುದನ್ನು ನಾವು ಗುರ್ತಿಸಬಹುದು.

ಆದಿ ಬಸವಣ್ಣ, ಅನಾದಿ ಲಿಂಗವೆಂಬರು! ಹುಸಿ ಹುಸಿ
ಈ ನುಡಿಯ ಕೇಳಲಾಗದು! ಆದಿ ಲಿಂಗ, ಅನಾದಿ ಬಸವಣ್ಣ;
ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು !
ಜಂಗಮವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು,
ಪ್ರಸಾದವು ಬಸವಣ್ಣನು ಅನುಕರಿಸಲು ಆಯಿತ್ತು; ಇಂತೀ ತ್ರಿವಿಧಕ್ಕೆ
ಬಸವಣ್ಣನೇ ಕಾರಣವೆಂದರಿದೆನಯ್ಯಾ, ಕೂಡಲ ಚೆನ್ನ ಸಂಗಮದೇವಾ॥ (ಚ.ಬ.ವ 25)
ಸ್ವಯಂಕೃತ ಸಹಜ ಕೂಡಲ ಚೆನ್ನ ಸಂಗಯ್ಯನಲ್ಲಿ ಬಸವಣ್ಣನು
ಚೆನ್ನ ಸಂಗಾ ನಿಮ್ಮಲ್ಲಿ, ಬಯಸಿ ಬೇಡುವಡೆ, ಬಸವಣ್ಣನಿಂದ ನೀವಾದಿರಾಗಿ ಕೂಡಲ
ಚೆನ್ನಸಂಗಯ್ಯನಲ್ಲಿ ಪ್ರಸಾದಿಯ ಪ್ರಸಾದಿಯಾದೆನು. (ಚ.ಬ.ವ 25)
ಅಂಗದ ಕೈಯಲ್ಲಿ ಲಿಂಗ, ಮನದ ಕೈಯಲ್ಲಿ ನಿಃಸಂಸಾರ ಎಂತಯ್ಯಾ?
--- ಕೆಳಗೇಳು ಲೋಕ, ಮೇಲೇಳು ಲೋಕ ಹುಟ್ಟದಲ್ಲಿಂದತ್ತತ್ತ ಮುನ್ನಲಾದ ಕರಸ್ಥಲವಲ್ಲ!
ಸಂಗನ ಬಸವಣ್ಣನ ಕರಸ್ಥಲದೊಳಗೆ ಗುಹೇಶ್ವರನೆಂಬ ಲಿಂಗವು
ತೊಳಗಿ ಬೆಳಗುತ್ತಿದ್ದುದ ಕಂಡು ನಮೋನಮೋ ಎನ್ನುತಿರ್ದೆನು॥ (ಅ.ಪ್ರ.ವ 891)
ಗುಹೇಶ್ವರಯ್ಯಾ ಅರಿಯಬಾರದ ಲಿಂಗವ ಅರಿವಂತೆ ಮಾಡಿಕೊಟ್ಟನು ಶ್ರೀಗುರು ಬಸವಣ್ಣ
(ಅ.ಪ್ರ.ವ 6)
ಗುಹೇಶ್ವರ ಲಿಂಗದಲ್ಲಿ ಪೂರ್ವಾಚಾರಿ ಸಂಗನ ಬಸವಣ್ಣನ ಶ್ರೀಪಾದಕ್ಕೆ ನಮೋನಮೋ ಎಂಬೆನು
ಬಯಲು ಪರಬ್ರಹ್ಮವೆಂಬ ನಾಮವನೆಯ್ದಿತ್ತು ನೋಡಾ ಬಸವಣ್ಣನಿನ್ನಿಂದ (ಅ.ಪ್ರ.ವ. 899)
ಮಹಾಮಹಿಮ ಸಂಗನ ಬಸವಣ್ಣನು ಎನಗೆಯೂ ಗುರು, ನಿನಗೆಯೂ ಗುರುದ ಜಗವೆಲ್ಲಕ್ಕೂ
ಗುರು ಕಾಣಾ ಗುಹೇಶ್ವರಾ (ಅ.ಪ್ರ.ವ)
ಗುಹೇಶ್ವರ ಲಿಂಗದ ಕಂಗಳ ಕಾಂತಿಗಳು ಸಂಗನ ಬಸವಣ್ಣನ ನಿವಾಳಿಸುತ್ತಿದ್ದವಯ್ಯಾ
(ಅ.ಪ್ರ.ವ 1236)
ಆದಿ ಜಂಗಮ ಅನಾದಿ ಭಕ್ತನೆಂಬುದ ನಾರುಬಲ್ಲರು ಹೇಳಾ ಬಸವಣ್ಣಾ? ---
ಲಿಂಗವ ಹಿಡಿದು ನೀನು ಪೂಜಿಸಲಾಗಿ ಲಿಂಗವು ಹೆಸರುವಡೆಯಿತ್ತು ನೋಡಾ ಬಸವಣ್ಣ!
ಇದು ಕಾರಣ ನೀನೇ ಅನಾದಿ ಭಕ್ತ, ನಾನೇ ಅನಾದಿಯಿಂದಿತ್ತತ್ತ! ನೀನು ಮಾಡಲಾಗಿ
ಆನಾದೆನೆಂಬುದ ನಮ್ಮ ಗುಹೇಶ್ವರನೆ ಬಲ್ಲ ಕಾಣಾ ಸಂಗನ ಬಸವಣ್ಣಾ! (ಅ.ಪ್ರ.ವ. 925)
"ಇಂತೀ ಸರ್ವವೂ ಶುದ್ಧವಾಯಿತ್ತು ಬಸವ ಇಂದೆನ್ನ, ಗುಹೇಶ್ವರ ಲಿಂಗಕ್ಕೆ
ಅಭಿನ್ನಾಧಾರವಾದೆಯಲ್ಲಾ ಬಸವಣ್ಣ"

Digitalized by e-Sahithya Documentation Forum
Sponsored by Sarayu Foundation Trust

ನಮ್ಮ ಗುಹೇಶ್ವರಲಿಂಗಕ್ಕೆ ಆದಿಯಿಂದತ್ತ ನೀನೇ ಭಕ್ತ --- (ಅ.ಪ್ರ.ವ)
ವೇದಾದಿಗಳಿಗೆ ನಿಲುಕದ, ನಿಖಿಳ ಶಿವಯೋಗಿಗಳ ಮನಕ್ಕೆ ತೋರದ
ಪರವಸ್ತುವ ಪಾಷಾಣದಲ್ಲಿಟ್ಟು ಕೊಟ್ಟನೆಂದಡೆ ನಂಬಬಹುದೆ ಜ್ಞಾನಿಗಳು (ಶ. ಕಂ. ಬ. 270)
ನಾ ಮಾಡುವ ಭಕ್ತಿಗೆ ನೀನೇ ಕರ್ತನು ಬಸವಾ
ಕರುಣಿಕಪಿಲಸಿದ್ಧ ಮಲ್ಲಿನಾಥ ಬಸವಾ॥ -ಸಿ.ವ 258
ನಿಮ್ಮ ಧರ್ಮವಯ್ಯ ಈ ಭಕ್ತಿಯ ಪಥವು
ಕರುಣಿ ಕಪಿಲಸಿದ್ಧಮಲ್ಲಿನಾಥಾ ನಿನಗೂ ಎನಗೂ ಬಸವಣ್ಣನ ಧರ್ಮವಯ್ಯಾ॥ -ಸಿ.ವ 953
ಅರಿದ ಮೂರ್ತಿಯ ನಿಮ್ಮಲ್ಲಿ ಕುರುಹಿಟ್ಟು ಕೊಂಡಿರೆ ಬಸವಾ
ಇಷ್ಟ ಬ್ರಹ್ಮಾಂಡವ ಘಟ್ಟಗೊಳಿಸಿದಿರಿ ಬಸವಾ॥ -ಶ.ಕಂ.ಬ 270
ನಿರಾಕಾರದ ಮೂರ್ತಿಯ ಆಕಾರಕ್ಕೆ ತಂದೆಯಲ್ಲಾ ಬಸವಾ
ಈ ಆಕಾರಕ್ಕೆ ತಂದು, ಭಕ್ತಿಯನನುಗೈದು ದಿಗುವಳದಲ್ಲಿ ಬೆಳೆದೆಯಲ್ಲ ಬಸವಾ! -ಶ.ಕಂ.ಬ 276
ಅಜನ ಕಲ್ಪಿತವಲ್ಲದ ಭಕ್ತಿ, ವಿಷ್ಣುವಿನ ಕಲ್ಪಿತವಲ್ಲದ ಭಕ್ತಿ,
ರುದ್ರನ ಕಲ್ಪಿತವಲ್ಲದ ಭಕ್ತಿ, ನಿನ್ನ ಕಲ್ಪಿತವಾಯಿತಯ್ಯಾ ಬಸವಾ
ನೋಟಕಾರರ ನೋಟಕ್ಕೆ ಸಿಕ್ಕಿದ ಭಕ್ತಿ ಕೂಟಕ್ಕೆ ಕೂಟವಾಯಿತಯ್ಯಾ ಬಸವಾ
ಈ ಬೇಟದ ಭಕ್ತಿಯ ನಿಮ್ಮಿಂದ ಕಂಡೆನಯ್ಯಾ ಬಸವ ಗುರುವೆ ಕಪಿಲಸಿದ್ಧಮಲ್ಲಿನಾಥಾ। -ಸಿ.ವ 933
ಮಹಾಜ್ಞಾನ ಮಹಾಪ್ರಕಾಶ ಬಸವಣ್ಣನ ಧರ್ಮವಯ್ಯ -ಸಿ.ವ 937
ಭಾವದ ಬಯಲಿಂಗೆ ಬಣ್ಣವಿಟ್ಟು ನಮ್ಮ ಬಸವಯ್ಯನು - ನೀಲಾಂಬಿಕೆ ಶಿ.ಶ.ವ ಪುಟ 170
ಬಸವಣ್ಣನು ಅನಾದಿ, ಲಿಂಗವಾದಿಜ ಎಂದರಿದೆನಾಗಿ ನೆನೆವುತ್ತಿರ್ದೆನಯ್ಯಾ
- ಮರುಳುಶಂಕರದೇವರು

ಕಪಿಲಸಿದ್ಧಮಲ್ಲಿನಾಥಯ್ಯಾ ನೀನನಾದಿ ಮೂಲದೊಡೆಯನೆಂದೆಂಬೆ
ನಿಮ್ಮ ಬಲ್ಲಾತ ಬಸವಣ್ಣಾ, ಗುರು ಲಿಂಗ ಜಂಗಮತ್ರಯವು ಬಸವಣ್ಣನಂಶಿಕವು
- ಸಿ.ವ 903

ಅರುಹಿನ ಕುರುಹಿಡಿದವ ನೀತಲಕವತರಿಸಿದ ಗಣಪಾಲ - ಮೈಲಾರ ಬಸವಲಿಂಗ ಶರಣರು.
ಅಮರೇಶ್ವರ ಲಿಂಗದ ಅನುವಿನ ಕಳೆ ನೀನು ಸಂಗನ ಬಸವಣ್ಣಾ - ಆಯ್ದಕ್ಕಿ ಮಾರಯ್ಯ
ಬಸವನೆಂಬ ಬೀಜದ ಮಧ್ಯದಲ್ಲಿ ಲಿಂಗವೆಂಬ ಅಂಕುರ ಉದಯವಾಯಿತ್ತು
- ಷಣ್ಮುಖ ಶಿವಯೋಗಿಗಳು

ಅನಾದಿ ಶರಣ ಆದಿಲಿಂಗವೆಂದೆ ಬಸವಣ್ಣನಿಂದೆ ಲಿಂಗವಾದ ಕಾರಣ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ॥ - ತೋಂಟದ ಸಿದ್ಧಲಿಂಗ ಶಿವಯೋಗಿಗಳು
ಎಲೆ ಶರಣರಿರಾ, ಎಲೆ ಭಕ್ತರಿರಾ
ಭಕ್ತಿಕಾಂಡದ ಮೂಲಿಗನ ಕಾಣಿರೆ, ಬಸವನ ! - ನೀಲಾಂಬಿಕಾ ತಾಯಿ, ಶ.ಕಂ.ಬ 632
ಭಕ್ತಿಯ ತವನಿಧಿಯೆ, ಮುಕ್ತಿಯ ಮೂರುತಿಯೆ
ಲಿಂಗ ಜಂಗಮದ ಚೈತನ್ಯವೇ
ಬಸವಣ್ಣಪ್ರಿಯ ಚನ್ನಸಂಗಯ್ಯ ॥ ಅಕ್ಕ ನಾಗಲಾಂಬಿಕೆ

ಅರಿಯುದಕೆ ಕುರುಹೆಂದು ಕರಲಿಂಗ ನೀ ಕೊಟ್ಟೆ
ಶರಣೆಂಬು ನುಡಿಯ ಫಲಮಾಡಿ। ಶಿವ ಮತಕೆ
ಗುರು ಬಸವಲಿಂಗ ನಿಜ ಮಂತ್ರ - ಜಾನಪದ ಗೀತೆ

ಹೀಗೆ ಎಲ್ಲಾ ಶರಣರೂ ಈ ಲಿಂಗವಂತ ಧರ್ಮದ ಕರ್ತನೂ, ಮೂಲಿಗನೂ ಬಸವಣ್ಣನವರೇ ಎಂದು ತಮ್ಮ ವಚನಗಳಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಶರಣ ಬಂಧುಗಳೇ, ಸ್ಪಷ್ಟವಾಗಿ ಈಗ ನಾವು ಒಂದು ನಿರ್ಧಾರಕ್ಕೆ ಬರಲೇಬೇಕಾಗಿದೆ. ನಮ್ಮ ಧರ್ಮ ಅಂದಿತ್ತು, ಇಂದಿತ್ತು, ಎಂದೆಲ್ಲಾ ಬೊಗಳೆ ಬಿಡುವ ಸ್ವಾಮಿಗಳಿರಲಿ, ಸಾಹಿತಿಗಳಿರಲಿ ಮತ್ತೆ ಯಾರೇ ಇರಲಿ, ಇವರಾರೂ ನಮ್ಮ ಆದಿ ಶರಣರಾದ ಪ್ರಭುದೇವರು, ಚನ್ನ ಬಸವಣ್ಣನವರು, ಅಕ್ಕಮಹಾದೇವಿ, ಸಿದ್ಧರಾಮೇಶ್ವರರು, ಮಾಚಿ ತಂದೆಗಳು, ನೀಲಾಂಬಿಕಾ ತಾಯಿ ಇನ್ನೂ ಮುಂತಾದ ಶರಣ ಪುಂಗವರಿಗೆ ಸರಿಸಾಟಿಯೇ ಅಲ್ಲ! ಶರಣರ ಮಾತಿನಲ್ಲಿ, ನಂಬಿಗೆ ಇಟ್ಟು ಬಸವಣ್ಣನವರೇ ನಮ್ಮ ಆದಿಗುರುವೆಂದು ನಂಬಿ ಲಿಂಗ ಪಥದಲ್ಲಿ ನಡೆದರೆ ಲಿಂಗದೇವನ ಘನ ಕೃಪೆ ನಮಗಾಗುತ್ತದೆ. ಇಲ್ಲವಾದರೆ ಬಸವಣ್ಣನವರನ್ನು ಮರೆತು ಲಿಂಗವನ್ನಷ್ಟೇ ಪೂಜಿಸಿದರೂ ಫಲವಿಲ್ಲವೆಂಬುದನ್ನರಿಯಬೇಕು.

ಬಸವನ ನೆನೆದು ಮಾಡುವ ಭಕ್ತಿ ನಡೆವುದಯ್ಯಾ
ಬಸವನ ನೆನೆಯದೆ ಮಾಡುವ ಭಕ್ತಿ ಎಳತಟವಯ್ಯಾ
ಬಸವಣ್ಣನ ತೊಂಡ ನಮ್ಮ ತಂದೆ;
ಬಹಿರ್ ಲಿಂಗದ ಪೂಜೆ ಮೋಟನ ಮೌಳಿಯಂತೆ ---
ಕಪಿಲ ಸಿದ್ಧಮಲ್ಲಿಕಾರ್ಜುನ ॥

ಎಂದು ಸಿದ್ಧರಾಮೇಶ್ವರರು ಸ್ಪಷ್ಟ ಪಡಿಸಿದ್ದಾರೆ. ಇನ್ನೂ ಮುಂದುವರಿದು ಹೇಳುತ್ತಾರೆ - ಜಗವು ನಿನ್ನಾಜ್ಞೆಯಲ್ಲಿಪ್ಪುದಯ್ಯಾ ಬಸವಣ್ಣನಾಜ್ಞೆಯಲ್ಲಿ ನೀನಿಪ್ಪೆಯಾಗಿ

ಅನಿಮಿಷಾನಂದದಲ್ಲಿ ಬಸವಾಕ್ಷರತ್ರಯ
ಗುರುಬಸವ ಮೂರ್ತಿ ಕಪಿಲ ಸಿದ್ಧಮಲ್ಲಿಕಾರ್ಜುನಾ॥
ಅಂಡಜದ ಪರಿಭವವು ಪಿಂಡಜದಲೊಪ್ಪುತಿರೆ
ಪಿಂಡ ಬ್ರಹ್ಮಾಂಡವನೇಕ ಮಾಡಿ
ಖಂಡೇಂದು ಶೇಖರನಿಗೆ ನೆಲೆಯ ಮಾಡಿದನೆನ್ನ
ಗಂಡ ಬಸವಣ್ಣನ್ಸೈ ಯೋಗಿನಾಥಾ॥

ಪಿಂಡ ಬ್ರಹ್ಮಾಂಡವನ್ನು ಒಂದೇ ರೂಪಗೊಳಿಸಿ ಅರ್ಥಾತ್ ಇಷ್ಟಲಿಂಗ ರೂಪದಲ್ಲಿ ಘಟ್ಟಗೊಳಿಸಿ ಪರಮಾತ್ಮನಿಗೆ ನೆಲೆಯನ್ನು ಮಾಡಿ ಪೂಜೆಗೊಳ್ಳುವಂತಹ ಸಾಧನೆಗೈದ ಶ್ರೇಯಸ್ಸು ಬಸವಣ್ಣನವರದೇ ಎಂದು ಸಿದ್ಧರಾಮೇಶ್ವರರು ಇಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಅನಿಮಿಷ ದೃಷ್ಟಿಯಿಂದ ಇಷ್ಟಲಿಂಗಾನುಸಂಧಾನ(ಮಧ್ಯ ತ್ರಾಟಕ)ದಲ್ಲಿ ಸಾಧನೆ ಮಾಡುವ ಸಾಧಕನಿಗೆ ನವಪ್ರಣವವಾದ ಬಸವಾಕ್ಷರತ್ರಯವೇ ಲಿಂಗದೇವನನ್ನೊಲಿಸುವ [illegible] ಲಿಂಗದೇವನಿಗೆ ಗುರು ಬಸವನಾಜ್ಞೆಯನ್ನು

Digitalized by e-Sahithya Documentation Forum
Sponsored by Sarayu Foundation Trust

ತಿರಸ್ಕರಿಸಲಾಗುವುದಿಲ್ಲ. ಯಾಕೆಂದರೆ ದೇವನ ನಿರಂಜನತ್ವತೆಗಾಗಲಿ, ನಿರಾಕಾರತ್ವಕ್ಕಾಗಲಿ, ಸರ್ವಜ್ಞತೆಗಾಗಲಿ, ಸರ್ವಶಕ್ತತೆಗಾಗಲೀ ಚ್ಯುತಿಯಾಗದ ರೂಪದಲ್ಲಿ(ಇಷ್ಟಲಿಂಗ ರೂಪದಲ್ಲಿ) ಜಗತ್ತಿಗೆ ತೋರ್ಪಡಿಸಿ, ತನ್ಮೂಲಕ ಪೂಜಿಸಿಕೊಳ್ಳುವಂತಹ ಭಾಗ್ಯ ದೇವನಿಗೆ ಬಸವಣ್ಣನವರಿಂದಲೇ ಪ್ರಾಪ್ತವಾದುದರಿಂದ ಪರಮಾತ್ಮನೂ ಸಹ ಬಸವಾಧೀನ.

ಆದುದರಿಂದಲೇ ಜಗನ್ಮಾತೆ ಅಕ್ಕ ಮಹಾದೇವಿ "ಬಸವಣ್ಣನ ತೇಜದೊಳಗಲ್ಲದೆ ಆ ನಿನ್ನನೆಂತು ಕಾಂಬೆನು?" ಎಂದು ಹೇಳಿರುವುದು. ಶಕ್ತಿ ವಿರಹಿತ ಶಿವನೆಂತೋ, ಅಂತೆ ಬಸವ ರಹಿತ ಲಿಂಗ ಪೂಜೆಯೂ ನಿಷ್ಪ್ರಯೋಜಕ.

ಲಿಂಗರೂಪನು ಬಸವ, ಜಂಗಮ ರೂಪನು ಬಸವ;
ಸಂಗ ನಿಜ ಗುರುಮೂರ್ತಿ ಬಸವಲಿಂಗ
ಅಂಗ ಲಿಂಗದ ಬೆಳಗ ನೊಂದು ಮಾಡಿಯೆ ತೋರ್ದ
ಸಂಗನ ಬಸವಣ್ಣನ್ಸ್ವಯೋಗಿನಾಥಾ ॥

ಅಂಗಲಿಂಗದ ಬೆಳಗೊಂದಾಗಿ, ಆ ಬೆಳಗು ಬೆಳಗ ಕೂಡಿದ ದಿವ್ಯಾನುಭವವಾಗಬೇಕಾದರೆ ಬಸವ ಭಾಸ್ಕರನ ತೇಜವಿಲ್ಲದೆ ಸಾಧ್ಯವಿಲ್ಲ ಎಂದು ಸಾರಿಸಾರಿ ಎಲ್ಲ, ಶಿವಯೋಗಿ ಪುಂಗವರು ಹೇಳಿದ ಮಾತಿನಲ್ಲಿ, ಶ್ರದ್ಧೆಯಿಟ್ಟು ನಾವು ಸಾಧನೆ ಮಾಡುವುದು ಶ್ರೇಯಸ್ಕರವೇ ವಿನಃ ಯಾರಯಾರದ್ದೂ ಕಪಟ ಮಾತುಗಳನ್ನು ಕೇಳಿ ಕೇಡಿಗೊಳಗಾಗಿ ಭಂಗಿತರಾಗಬಾರದು. ಭವಭಾರಿಗಳಾಗಬಾರದು!

ಕನ್ನಡ ನಾಡಿನ ಶ್ರೇಷ್ಠ ಶಿವಯೋಗಿಯೂ, ತ್ರಿಪದಿಕಾರನೂ, ನಿರ್ಭೀತ ಜಂಗಮ ಪುಂಗವನೂ ಆದ ಸರ್ವಜ್ಞ ಮೂರ್ತಿಯ ಕೆಳಗಿನ ವಚನವನ್ನು ಅವಲೋಕಿಸೋಣ.

ಆದಿ ಗುರುರಾಯನು ಭೇದಿಸಿ ಲಿಂಗವ ಕೊಟ್ಟ।
ಮೂದೇವರೊಡೆಯ। ಮೂಜಗದ ಕರ್ತನು
ಆದಿ ಗುರು ಬಸವ ಸರ್ವಜ್ಞ ॥
ಬಸವ ಗುರುವಿನ ಹೆಸರ ಬಲ್ಲವರಾರಿಲ್ಲ!
ಹುಸಿ ಮಾತ ನಾಡಿ ಕೆಡದಿರಿ। ಲಿಂಗಾಯತಕೆ
ಬಸವನೇ ಕರ್ತೃ ಸರ್ವಜ್ಞ ॥

ಲಿಂಗಾಯತ ಧರ್ಮದ ಕರ್ತೃ ಬಸವಣ್ಣನವರೇ, ಸುಳ್ಳು ಮಾತುಗಳನ್ನು ಹೇಳಿ ಕೆಡಬೇಡಿ. ಜಗದಾರಾಧ್ಯ ಬಸವಣ್ಣನವರನ್ನು ಗೌಣ ಮಾಡಹೊರಟಿರುವವರು ತಾವೇ ಹೇಳ ಹೆಸರಿಲ್ಲದಂತಾಗಿ ಕಾಲನ ಗರ್ಭದಲ್ಲಿ ನಾಮಾವಶೇಷರಾಗುವುದರಲ್ಲಿ ಯಾವುದೇ ಉತ್ಪ್ರೇಕ್ಷೆಯೂ ಇಲ್ಲ. ಗುರುದೇವ ಬಸವಣ್ಣನವರು ಜ್ಯೋತಿಸ್ವರೂಪರಾಗಿ ಇಡೀ ಜಗವನ್ನೇ ಬೆಳಗುವರು. ಇದಕ್ಕೆ ಯಾವ ಅನುಮಾನವೂ ಬೇಡ. ಇದು ಆದಿಶರಣರ ಸತ್ಸಂಕಲ್ಪವೇ ಇರುವುದರಿಂದ ಇದು ನಿಜವಾಗಿಯೇ ತೀರಬೇಕು. ಇದಕ್ಕೆ ಪೂರಕವಾಗಿಯೇ ನಮ್ಮಗಳೆಲ್ಲರ ಪಥವೂ ಸಾಗಬೇಕಾಗಿದೆ. ★★

★★ ಕಲ್ಯಾಣ ಕಿರಣ ಮಾಸ ಪತ್ರಿಕೆ ಕೆಲವು ಕಾಲ ನಿಮ್ಮ ಕೈ ತಲುಪಿ, ಮುಂದಿನ ಸಂಚಿಕೆಗಳು ಬರುವುದು ನಿಂತಿದ್ದರೆ, ನಿಮ್ಮ ಪೋಸ್ಟಲ್ ವಿಳಾಸವನ್ನು [illegible] ಕ್ಕೆ ಕಳಿಸಿರಿ. - ವ್ಯವಸ್ಥಾಪಕರು.




ಬಳ್ಳಿಗಾವಿಯಿಂದ ಪೂಜ್ಯ ಚನ್ನಬಸವರಾಜ ಸ್ವಾಮಿಗಳ ನೇತೃತ್ವದಲ್ಲಿ ತರಲಾದ ಅಲ್ಲಮ ಪ್ರಭು ಜ್ಯೋತಿಯನ್ನು ಪೂಜ್ಯ ಶ್ರೀ ಮಹಾಜಗದ್ಗುರು ಮಾತಾಜಿ ಹಾಗೂ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರು ಬಸವ ಮಹಾಮನೆಯಲ್ಲಿ ಸ್ವಾಗತಿಸುತ್ತಿರುವುದು



ಪೂಜ್ಯ ಮಾತಾಜಿಯವರಿಂದ ಹುತಾತ್ಮ ಶರಣ ಹರಳಯ್ಯನವರ ಜ್ಯೋತಿಯ ಸ್ವಾಗತ

Digitalized by e-Sahithya Documentation Forum
Sponsored by Sarayu Foundation Trust



ಪೂಜ್ಯ ಮಾತಾಜಿಯವರಿಂದ ವೀರ ವೈರಾಗ್ಯನಿಧಿ ಅಲ್ಲಮ ಪ್ರಭು ಜ್ಯೋತಿಯ ಸ್ವಾಗತ



ಕಲ್ಯಾಣ ಜ್ಯೋತಿಯಾತ್ರೆಯನ್ನು ಆರಂಭಿಸಿರುವ ಕೊಲ್ಲಾಪುರ [illegible] ಕಾರ್ಯಕರ್ತ[illegible]
ಪೂಜ್ಯ ಮಾತಾಜಿಯವರು ಜ್ಯೋತಿಯನ್ನು ಬೀಳ್ಕೊಡುತ್ತಿರುವುದು



ಪೂಜ್ಯ ಮಾತಾಜಿಯವರಿಂದ ಬಸವ ಜ್ಯೋತಿಯ ಸ್ವಾಗತ



ಪೂಜ್ಯ ಮಾತಾದ್ವಯರಿಂದ ಮಹಾಗಣ ಪ್ರಸಾದಿ ಡೋಹಾರ ಕಕ್ಕಯ್ಯ ಜ್ಯೋತಿಯ ಸ್ವಾಗತ


Digitalized by e-Sahithya Documentation Forum
Sponsored by Sarayu Foundation Trust



ಪೂಜ್ಯರಾದ ಮಾತಾಜಿ ಹಾಗೂ ಗಂಗಾ ಮಾತಾಜಿಯವರಿಂದ ಬಸವ ಯೋಗಿ ಸಿದ್ಧರಾಮೇಶ್ವರ ಜ್ಯೋತಿಯ ಸ್ವಾಗತ



ಬಸವ ಮಹಾಮನೆಯಲ್ಲಿ ಕಲ್ಯಾಣ ಜ್ಯೋತಿಯ ಪುನರುದ್ದೀಪನಗೊಳಿಸುತ್ತಿರುವ ಪೂಜ್ಯ ಮಾತಾಜಿಯವರು



ಬಸವ ಕಲ್ಯಾಣದ ಮಹಾಮನೆಯ ಮುಂಭಾಗದಲ್ಲಿ ನಿರ್ಮಿಸಲಾಗಿರುವ
ವೀರ ಗಣಾಚಾರಿ ಮಡಿವಾಳ ಮಾಚಿದೇವರ ಮಹಾದ್ವಾರ




[illegible] ವೀರಗಣಾಚಾರಿ ಮಡಿವಾಳ ಮಾಚಿದೇವ ಮಹಾದ್ವಾರದ ಉದ್ಘಾಟನಾ ಸಂದರ್ಭದಲ್ಲಿ
ಅಸಂಖ್ಯಾತ ಶರಣ ಸಮೂಹ


Digitalized by e-Sahithya Documentation Forum
Sponsored by Sarayu Foundation Trust



ಪಥ ಸಂಚಲನದಲ್ಲಿ ಉತ್ಸಾಹದಿಂದ ಭಾಗಿಯಾದ ಶರಣ ಸಮೂಹ



ಧರ್ಮಪಿತ ಬಸವಣ್ಣನವರನ್ನು ಹೊತ್ತುಕೊಂಡು ಹುತಾತ್ಮ [illegible] ವೇದಿಕೆಯತ್ತ [illegible]
ಪೂಜ್ಯ ಬಸವಾತ್ಮಜೆ ಹಾಗೂ ಶರಣ ವೃಂದ



ಬಸವ ಧ್ವಜಾರೋಹಣ ಸಂದರ್ಭದಲ್ಲಿ ವೇದಿಕೆಯ ಮೇಲೆ ಉಪಸ್ಥಿತರಿದ್ದ ಪೂಜ್ಯರು



ಸಾಮೂಹಿಕ ಪ್ರಾರ್ಥನಾ ಸಭೆಯಲ್ಲಿ ಭಾಗಿಗಳಾದ ಬಸವ ಧರ್ಮ ಪೀಠದ ಪೂಜ್ಯರು ಹಾಗೂ ಗಣ್ಯರುಗಳು


Digitalized by e-Sahithya Documentation Forum
Sponsored by Sarayu Foundation Trust



ಪೂಜ್ಯ ಮಾತೆ ಯೋಗೀಶ್ವರಿ (ಪೂರ್ವಾಶ್ರಮದ ಹೆಸರು ರೂಪಕಾ ಮಹಾಲಿಂಗಯ್ಯ) ಅವರಿಂದ ಕಲ್ಯಾಣ ಪರ್ವದ ಉದ್ಘಾಟನೆ



ಕಲ್ಯಾಣ ಪರ್ವದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಜಕೀಯ ಮುಖಂಡರಾದ ಶರಣ ಕಂಟೆಪ್ಪದಾನಾ ಅವರನ್ನು ಪೂಜ್ಯ ಬಸವ ಕುಮಾರ ಸ್ವಾಮಿಗಳು ಶಾಲು ಹೊದಿಸಿ ಸತ್ಕರಿಸುತ್ತಿರುವುದು




ಕಲ್ಯಾಣಪರ್ವದಲ್ಲಿ - ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿಯನ್ನು ಉದ್ಘಾಟಿಸುತ್ತಿರುವ ಪರಮ ಪೂಜ್ಯ ಮಹಾಜಗದ್ಗುರು ಮಾತೆ ಮಹಾದೇವಿಯವರು. ಪೂಜ್ಯರಾದ ಮಾತೆ ಗಂಗಾದೇವಿಯವರು, ಪೂಜ್ಯ ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಚನ್ನಬಸವರಾಜ ಸ್ವಾಮೀಜಿ ಹಾಗೂ ಪೂಜ್ಯ ಬಸವಕುಮಾರ ಸ್ವಾಮಿಗಳನ್ನು ಚಿತ್ರದಲ್ಲಿ ಕಾಣಬಹುದು



[illegible] ಧರ್ಮ ಚಿಂತನ ಗೋಷ್ಠಿಯ ಉದ್ಘಾಟನೆ


Digitalized by e-Sahithya Documentation Forum
Sponsored by Sarayu Foundation Trust




ಸಾಮೂಹಿಕ ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆ ತೋರಿಸುತ್ತಿರುವ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ,
ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ, ಪೂಜ್ಯ ಬಸವ ಕುಮಾರ ಸ್ವಾಮೀಜಿ ಮತ್ತು ಪೂಜ್ಯ ಚನ್ನಬಸವರಾಜ ಸ್ವಾಮೀಜಿ



ಇಷ್ಟಲಿಂಗ ಪೂಜಾನಿರತ ಶರಣ[illegible]




ಕಲ್ಯಾಣಪರ್ವದ ಉದ್ಘಾಟನಾ ಸಂದರ್ಭದಲ್ಲಿ ಅಮೆರಿಕಾದ ಅಂತರಾಷ್ಟ್ರೀಯ ಬಸವ ತತ್ತ್ವ ಕೇಂದ್ರದ ಪ್ರಮುಖರಾದ ಮಾತೆ ಯೋಗೀಶ್ವರಿ ಗುರು ಬಸವಣ್ಣನವರ ಪೂಜೆ ಸಲ್ಲಿಸುತ್ತಿರುವುದು. ಪೂಜ್ಯರು ಹಾಗೂ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.



ಶೂನ್ಯ ಪೀಠಾರೋಹಣ ಸಂದರ್ಭದಲ್ಲಿ ವೈರಗ್ಯಾನಿಧಿ ಅಲ್ಲಮ ಪ್ರಭುದೇವರ ಭಾವಚಿತ್ರದ ಪೂಜೆ. ಬಸವ ಧರ್ಮ ಪೀಠದ [illegible] ಶರಣ, ವೀರಣ್ಣ ಕೊರ್ಲ್ಹಳ್ಳಿ, ಶರಣೆ, ದೇವಿಕಾ ಶರಣಪ್ಪ ಅವರುಗಳು ಚಿತ್ರದಲ್ಲಿದ್ದಾರೆ


Digitalized by e-Sahithya Documentation Forum
Sponsored by Sarayu Foundation Trust



ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರ ಪುತ್ಥಳಿಯ ಅನಾವರಣದ ನಂತರ ಪುಷ್ಪವೃಷ್ಟಿ



ವಿಶ್ವಕಾಯಕದ ದಿನದಂದು ಷಡ್‌ಗಣಾಧೀಶರಿಂದ ಶರಣ ವಂದನೆ ಕಾರ್ಯಕ್ರಮದ ಉದ್ಘಾಟನೆ



ಪ್ರವಚನ ಪಿತಾಮಹ ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಪುತ್ಥಳಿ ಅನಾವರಣದ ನಂತರ
ಪೂಜ್ಯ ಚನ್ನಬಸವರಾಜ ಸ್ವಾಮಿಗಳು ಪೂಜೆ ಸಲ್ಲಿಸುತ್ತಿರುವುದು

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನ ಬೇಡ ;
ಮುಂದಣ ಫಲದೊಳಗರಸಿಕೊ !
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನ ಬೇಡ
ಮುಂದಣ ಬಣ್ಣದೊಳಗರಸಿಕೊ !
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನ ಬೇಡ
ಮುಂದಣ ಅಗ್ನಿಯೊಳಗರಸಿಕೊ !
ಲಿಂಗದೊಳಗೆ ಪ್ರಾಣ, ಪ್ರಾಣದೊಳಗೆ ಲಿಂಗ,
ಇದು ಕಾರಣ, ಕೂಡಲ ಚನ್ನಸಂಗನ ಶರಣರ
ಪ್ರಾಣ ಪ್ರತಿಬಿಂಬದೊಳಗರಸಿಕೊ, ಸಂಗನ ಬಸವಣ್ಣಾ!
- ಚನ್ನ ಬಸವಣ್ಣನವರು


Digitalized by e-Sahithya Documentation Forum
Sponsored by Sarayu Foundation Trust




ಕಲ್ಯಾಣ ಕ್ರಾಂತಿ ರೂಪಕ ಮಾಡಿರುವ ಚಿತ್ರದುರ್ಗದ ಶರಣೆ ವಚನ ಸುಧಾ, ಶರಣೆ ಪ್ರತಿಭಾ ಗರಗದ ಮತ್ತು
ಕುಮಾರಿ ಬಸವ ಜ್ಯೋತಿ ಚಿತ್ರದಲ್ಲಿದ್ದಾರೆ



ಶರಣರೆಲ್ಲರ ಗಮನ ಸೆಳೆದ "ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ" ರೂಪಕದ ಪಾತ್ರಧಾರಿಗಳೊಂದಿಗೆ ಪೂಜ್ಯರು



ಬೀದರ ರಾಷ್ಟ್ರೀಯ ಬಸವ ದಳದ ಮಕ್ಕಳಿಂದ ಕೋಲಾಟ



ವಚನ ನೃತ್ಯ ಪ್ರದರ್ಶನದಿಂದ ಎಲ್ಲರ ಮನವನ್ನು ತಣಿಸಿದ ಧಾರವಾಡದ ಪ್ರತಿಭಾ ಗರಗ್ ಹಾಗೂ
ಬಾಗಲಕೋಟೆಯ ಭಾಗ್ಯ ಎ ಅಂಗಡಿಯವರಿಗೆ ಪೂಜ್ಯ ಮಾತಾಜಿಯವರು ಆಶೀರ್ವಾದಿಸುತ್ತಿರುವುದು


Digitalized by e-Sahithya Documentation Forum
Sponsored by Sarayu Foundation Trust



ಬೀದರ್ ರಾಷ್ಟ್ರೀಯ ಬಸವ ದಳದ ಮಕ್ಕಳಿಂದ ಕೋಲಾಟ ನೃತ್ಯದ ಪ್ರದರ್ಶನ



ಬೀದರ ರಾಷ್ಟ್ರೀಯ ಬಸವ ದಳದ ಪುಟಾಣಿಗಳಿಂದ [illegible]




ಬೀದರ ಬಸವ ಮಂಟಪದಲ್ಲಿ ಬಸವ ಜಯಂತಿ ತೊಟ್ಟಿಲು ಕಾರ್ಯಕ್ರಮದಲ್ಲಿ ಪೂಜ್ಯ ಮಾತಾಜಿಯವರು
ಬೀದರ ರಾಷ್ಟ್ರೀಯ ಬಸವ ದಳದ ಅಧ್ಯಕ್ಷೆ ಶರಣೆ ಚಂದ್ರಮ್ಮ ಪಾಟೀಲ ಗಾದಗಿ ಮತ್ತಿತರ ಶರಣರು



[illegible] ಬಸವ ದಳದ ಶರಣೆಯರಿಂದ ತೊಟ್ಟಿಲು ಕಾರ್ಯಕ್ರಮ


Digitalized by e-Sahithya Documentation Forum
Sponsored by Sarayu Foundation Trust



ಕಲ್ಯಾಣಪರ್ವದ ಧ್ವಜಾರೋಹಣದಲ್ಲಿ ಭಾಗಿಗಳಾದ ಶರಣ-ಶರಣೆಯ ಸಮೂಹ



ಪ್ರತಿಜ್ಞಾ ಪೂರ್ವಕವಾಗಿ ಬಸವ ಧ್ವಜಾರೋಹಣದಲ್ಲಿ ಪಾಲ್ಗೊಂಡಿರುವ ಶರಣರ ಸಮೂಹ ಮತ್ತು ಶರಣೆಯರ ಸಮೂಹ



ಕೂಡಲ ಸಂಗಮದ ಮಹಾಮಠದಲ್ಲಿ ಬಸವ ಪೌರ್ಣಿಮೆ ಆಚರಣೆ. ಪೂಜ್ಯ ಬಸವ ಕುಮಾರ ಸ್ವಾಮೀಜಿ ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಶರಣ ಬಸವರಾಜ್ ಲುಕ್, ಶರಣ ಜಿ. ಜಿ. ಪಾಟೀಲ ಅವರು ಚಿತ್ರದಲ್ಲಿದ್ದಾರೆ



ಬಸವ ಪೂರ್ಣಿಮೆ ಕಾರ್ಯಕ್ರಮ ಕೂಡಲ ಸಂಗಮದಲ್ಲಿ


Digitalized by e-Sahithya Documentation Forum
Sponsored by Sarayu Foundation Trust



ಬೀಳ್ಕೊಡುಗೆ ಸಮಾರಂಭ: ಬೆಂಗಳೂರಿನ ಪುರಭವನಕ್ಕೆ ಪೂಜ್ಯ ಮಾತಾಜಿಯವರನ್ನು ಹೃತ್ಪೂರ್ವಕವಾಗಿ ಭಕ್ತವೃಂದ ಸ್ವಾಗತಿಸುತ್ತಿರುವುದು. ಚಿತ್ರದಲ್ಲಿ ಶರಣ ಪುಟ್ಟರುದ್ರರವರು, ಪೂಜ್ಯ ಬಸವಕುಮಾರ ಸ್ವಾಮೀಜಿ, ಪೂಜ್ಯ ಮಾತೆ ನೀಲಗಂಗಾ ದೇವಿಯವರು ಇದ್ದಾರೆ



ಬೀಳ್ಕೊಡುಗೆ ಸಮಾರಂಭ: ಬೆಂಗಳೂರಿನ ಪುಟ್ಟಣ್ಣ ಚೆಟ್ಟಿ [illegible] ಪಾದಕ್ಕೆ ಹೂ [illegible]ತ್ತಿರುವುದು




ಧರ್ಮ ಪ್ರಚಾರಕ್ಕಾಗಿ ವಿದೇಶ ಪ್ರವಾಸ ಕೈಗೊಳ್ಳುತ್ತಿರುವ ಪೂಜ್ಯ ಮಾತಾಜಿಯವರು, ಬೆಂಗಳೂರಿನ ಪುರಭವನದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಗುರು ಬಸವಣ್ಣನವರಿಗೆ ಪೂಜೆ ಸಲ್ಲಿಸುತ್ತಿರುವುದು




[illegible]ಗೆ [illegible] ಶ್ರೀ ಮಾತೆ ಗಂಗಾದೇವಿಯವರು ಪೂಜ್ಯ ಶ್ರೀ ಮಾತಾಜಿಯವರಿಗೆ ಆರತಿ ಬೆಳಗಿ ಶುಭ ಕೋರುತ್ತಿರುವುದು

Digitalized by e-Sahithya Documentation Forum
Sponsored by Sarayu Foundation Trust



ಬೀಳ್ಕೊಡುಗೆ ಸಮಾರಂಭ: ಪೂಜ್ಯ ಮಾತಾಜಿಯವರಿಗೆ ಪುಷ್ಪವೃಷ್ಟಿಯ ಮೂಲಕ ಅಭಿನಂದನೆ ಸಲ್ಲಿಸುತ್ತಿರುವ ಪೂಜ್ಯರುಗಳು ಮತ್ತು ಗಣ್ಯರು



ಬೀಳ್ಕೊಡುಗೆ ಸಮಾರಂಭ: ಪೂಜ್ಯ ಮಾತಾಜಿಯವರಿಗೆ ಆರತಿ ಬೆಳಗಿ ಅಭಿನಂದಿಸುತ್ತಿರುವ ಶರಣೆಯರು



ಪೂಜ್ಯ ಮಾತಾಜಿಯವರ ವಿದೇಶ ಪ್ರವಾಸ ನಿಮಿತ್ತ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಜ್ಯೋತಿ ಬೆಳಗಿಸುತ್ತಿರುವ ಸುಮಂಗಲಿ ಸೇವಾಶ್ರಮದ ಶರಣೆ ಶ್ರೀಮತಿ ಸುಶೀಲಮ್ಮನವರು



ಬೀಳ್ಕೊಡುಗೆ ಸಮಾರಂಭ: ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರದ ನಿರ್ದೇಶಕರಾದ ಡಾ॥ ಪ್ರಭುದೇವ್‌ರವರು ಪೂಜ್ಯ ಮಾತಾಜಿಯವರಿಗೆ ಶಾಲು ಹೊದಿಸಿ ಸನ್ಮಾನಿಸುತ್ತಿರುವುದು

Digitalized by e-Sahithya Documentation Forum
Sponsored by Sarayu Foundation Trust



ಬೀಳ್ಕೊಡುಗೆ ಸಮಾರಂಭ: ಪೂಜ್ಯರುಗಳು, ಗಣ್ಯರು, ಭಕ್ತರು, ಅಭಿಮಾನಿಗಳಿಂದ ಪೂಜ್ಯ ಮಾತಾಜಿಯವರಿಗೆ ಅಭಿನಂದನೆಯ ಮಹಾಪೂರ



ಶರಣೆ ಸುಶೀಲಮ್ಮನವರು ಪುಷ್ಪವೃಷ್ಟಿ ಮಾಡುತ್ತಿರುವುದು. ಎಡತುದಿಯಲ್ಲಿ ಪೂಜ್ಯ ದಯಾನಂದ ಸ್ವಾಮೀಜಿ ಮತ್ತು ಶರಣ ಡಾ|| ಪ್ರಭುದೇವ ಅವರು ಇದ್ದಾರೆ.



ಬೀಳ್ಕೊಡುಗೆ ಸಮಾರಂಭ: ತಮ್ಮ ನೃತ್ಯದಿಂದ ಎಲ್ಲರ ಮನಸೂರೆಗೊಂಡ ಶರಣೆ ಪ್ರತಿಭಾ ಮತ್ತು ಶರಣೆ ಮಮತಾರವರು ಪೂಜ್ಯ ಮಾತಾಜಿಯವರ ಬಗ್ಗೆ ಬರೆದ ಹಾಡನ್ನು ನೃತ್ಯದ ಮೂಲಕ ಪ್ರದರ್ಶಿಸಿ ಎಲ್ಲರ ಪ್ರಶಂಸೆ ಪಡೆದರು




ಬೀಳ್ಕೊಡುಗೆ ಸಮಾರಂಭ: [illegible] ಶರಣೆ ಪ್ರತಿಭಾ ಇವರ ನೇತೃತ್ವದಲ್ಲಿ ನಡೆದ "ಕಲ್ಯಾಣ ಕ್ರಾಂತಿ" ನೃತ್ಯ ರೂಪಕದಲ್ಲಿ ಭಾಗವಹಿಸಿದ್ದ ಶರಣ ಶರಣೆಯರು ಮತ್ತು ಪೂಜ್ಯರ ತಂಡ

Digitalized by e-Sahithya Documentation Forum
Sponsored by Sarayu Foundation Trust



ಬೀಳ್ಕೊಡುಗೆ ಸಮಾರಂಭ: ಡಾ॥ ಪ್ರಭುದೇವ್‌ರವರಿಗೆ ಪೂಜ್ಯ ಮಾತಾಜಿಯವರು ಶಾಲು ಹೊದಿಸಿ ಆಶೀರ್ವಾದ ಮಾಡುತ್ತಿರುವುದು



ಮಾನಸ ಗಂಗೋತ್ರಿ ವಿದ್ಯಾಲಯದ ಕಾರ್ಯದರ್ಶಿಗಳಾದ ಶರಣ ಬಸವರಾಜ್‌ರವರು ಪೂಜ್ಯ ಮಾತಾಜಿಯವರಿಗೆ [illegible]

LIGHT OF LORD BASAVA

K. Basava Raj Belgaum &
Konda Basava Raju
Hyderabad

A well acknowledged saying of Prof. R.K. Srikantan is "It is no exaggeration to say that the message of Basava is like a reservoir unto which all previous thoughts flowed in and from which all later thoughts flowed out. Kind like Buddha, simple like Mahaveera, compassionate like Jesus, bold like Mohammed, he strikes us about as a wonder of creation. But what attracts us most are those teaching of his in which he anticipated the greatest of modern thinkers - Karl Marx and Mahatma Gandhi.

Mr. Arthur Miller quotes " Whatever Legend may say about Basava, the fact is fully clear that he is the first Indian free thinker, He can be called the Martin Luther of India.'

Such are the experiences about the profile of Lord Basava. To put it in his own words "Iam the youngest of all' though he was the Prime Minister in the King Bijjala, who ruled Chalukyan dynasty from 1160 to 1196 A.D.

Let us know briefly about prophet Basava who introduces the worship of formless God (the real supreme God) and gave "Lingavantha Dharma' to the Indian mass. He was born in the year 1134 A.D and got spiritual attainment (Lingaikya) in the year 1196 A.D.

At the age of eight he renounced the ritual of wearing holy thread, the ritual of Brahmins insisted by his parents Madarasa and Madalambike/ saying the practice was discriminatory between men and women. He left his parents an joined at Kudalasangama Gurukul, of which the head was Eshanya Guru Jathaveda. He learnt Vedas, Agamas, Upanishads, Shastras, Puranas and about all the world religions. True to his interest in the social and philosophical aspects

Digitalized by e-Sahithya Documentation Forum
Sponsored by Sarayu Foundation Trust

of the human beings, he was thinking of an universal way of life where there is no discrimination between men and women, men and men and He felt that God who is omnipotent and omnipresent cannot have the form, and the practise of temple culture is harming the Indian society, in which (pujari) priest cult are the beneficiaries. He was the First prophet who gave the form of "Ishtalinga' the universal symb0l represents supreme God.

Basavanna established the first parliament of the world and named it as "Anubhaa Mantapa' where the people from all walks of life converged, discussed and debated and finally gave the cream of life by giving "Vachana literature' which got the importance like Bible, Quran and Bhagavadgita for the follow up of every human being. His preaching are :

1. Formless supreme God only should be worshipped apart from being prayed and meditated.

2. Heaven and Hell do not exist elsewhere. Talking truth, practising truthand sweet talking is itself is heaven.

3. Principle of work is Worship (Kayakave Kailasa) is the very abode of God. Everyone Men and women must do work for their livelihood.

4. The principle of distribution out of one's earning should necessarily go to the welfare of the other beings which Basava titled as Dasoha.

5. The compassion to all the creatures is to be followed while following seven steps to success in the life

Dont't steal, kill, lie
Dont't become angry, jealous
Dont't condemn others and describe self.

6. Men and women equality for the practise of spiritual attainment six steps called "Shatasthalas' (Bhaktha-Mahesha-Prasadi-Pranalingi-Sharana-Ikya). Like gents, ladies can also become Jangama, Guru and finally Jagadguru in the realm of religious propagation.

Let Basava's light of thoughts and actions glitter still further and remove the darkness surrounding the society, making it universally acceptable to one and all.

* *

ಅದ್ಭುತ ಯಶಸ್ಸಿನ ಎರಡನೆಯ ಕಲ್ಯಾಣ ಪರ್ವ ಹಾಗೂ ಬಸವ ತತ್ತ್ವ ತರಬೇತಿ ಕಮ್ಮಟ

ಮನುಕುಲದ ಲೇಸನು ಬಯಸಿದ ಬಸವ ಗುರು
ಕಲ್ಯಾಣ ಪುರದೊಳು ಅಂದು ಹೊತ್ತಿಸಿದ
ಜ್ಯೋತಿ ಬೆಳಗುತಿದೆ ಕಲ್ಯಾಣದ ಜ್ಯೋತಿ ಬೆಳಗುತಿದೆ

ಎಂದು ಪರಮ ಪೂಜ್ಯ ಮಾತಾಜಿಯವರ ಹೃದಯ ವೀಣೆಯಿಂದ ಹೊರ ಹೊಮ್ಮಿದ ಸುಮಧುರಗಾನ ಇದಾಗಿದೆ. ಅಂದು ವಿಶ್ವಗುರು ಅಪ್ಪ ಬಸವಣ್ಣನವರು ಕಲ್ಯಾಣವೆಂಬ ಪ್ರಣತೆಯಲ್ಲಿ ಸದ್‌ಭಕ್ತಿರಸದ ತೈಲವನೆರೆದು ಸದಾಚಾರದ ಬತ್ತಿಗೆ ತಾವೇ ಜ್ಯೋತಿಯಾಗಿ ಸ್ಪರ್ಶಿಸಿದರು. ಆಗ ವಿಶ್ವ ವ್ಯಾಪಿಯಾಗಿ ಚೆಲ್ಲವರಿಯಿತು ದೈವೀ ಪ್ರಕಾಶ(Divine light). ವರ್ಣಾಂತರ ವಿವಾಹದ ನೆಪದಲ್ಲಿ ಸಿಡಿದೆದ್ದ ಜಾತಿವಾದಿಗಳು, ಪಟ್ಟಭದ್ರ, ಪುರೋಹಿತರು ಆಗಿದ್ದ ಕೊಂಡೆಮಂಚಣ್ಣ ಮತ್ತು ನಾರಾಯಣ ಕ್ರಮಿತರಿಂದಾಗಿ ಭಕ್ತಿ ಸಾಮ್ರಾಜ್ಯವಾಗಿ 36 ವರ್ಷಗಳ ಕಾಲ ವೈಭವದಿಂದ ಮೆರೆದ ಕಲ್ಯಾಣವು ಹಾಳು ದೇಗುಲವಾಯಿತು. ಗುರು ಬಸವಣ್ಣನವರು ಗಡಿಪಾರು ಶಿಕ್ಷೆಯನ್ನು ಸ್ವೀಕರಿಸಿ ಕಲ್ಯಾಣದಿಂದ ನಿರ್ಗಮಿಸಿದಾಗ ಕಲ್ಯಾಣದಲ್ಲಿ ಕತ್ತಲೆ ಆವರಿಸಿತು. "ಕಲ್ಯಾಣದ ಭಾಗ್ಯರವಿ ಅಸ್ತಂಗತನಾದ ಆವನ ಬೆಳಕಿನಲ್ಲಿ ಬೆಳಗುತ್ತಿದ್ದ ಬಿಜ್ಜಳನೆಂಬ ಚಂದ್ರ ಕಳಾಹೀನನಾದ' ಎಂಬಂತೆ ಮತಾಂಧತೆಯ ಕತ್ತಲಲ್ಲಿ ಆ ದುಷ್ಟ ಜನರು ಸತ್ಯ ಶರಣರ ಹತ್ಯೆಗೈದರು. ಅನಂತ ಕಿರುಕುಳ ನೀಡಿದರು. ಬಸವ ಭಾಸ್ಕರನು ಕಲ್ಯಾಣದಿಂದ ನಿರ್ಗಮಿಸಿದಾಕ್ಷಣವೇ ಪ್ರಣತೆ ಒಡೆಯಿತು, ಬತ್ತಿ ಜಾರಿತು, ದೀಪ ನಂದಿತು. ಅಸಂಖ್ಯಾತ ಶರಣರೆಲ್ಲರೂ "ಜಯ ಗುರು ಬಸವೇಶ" ಎಂದು ಕ್ರಾಂತಿ ಗೀತೆಯನ್ನು ಹಾಡುತ್ತ ವಚನ ವಾಙ್ಮಯದ ರಕ್ಷಣೆಗಾಗಿ ಹೋರಾಡಿ, ಪ್ರಾಣ ಬಲಿದಾನ ಮಾಡಿ ವಚನ ವಾಙ್ಮಯವನ್ನು ನಮಗಾಗಿ ಉಳಿಸಿಕೊಟ್ಟಿರುವುದು ಮಾತ್ರವಲ್ಲದೆ 770 ವರುಷಗಳ ನಂತರ ಮತ್ತೆ ನಾವು ಕಲ್ಯಾಣ ರಾಜ್ಯವನ್ನು ಕಟ್ಟಲು ತತ್ತ್ವದ ರೂಪದಲ್ಲಿ ಬರುತ್ತೇವೆ ಎಂದು ಸತ್ ಸಂಕಲ್ಪ ಮಾಡಿಹೋದರು.

ಆದಿ ಶರಣರ ಸಂಕಲ್ಪದಂತೆಯೇ ಇಂದು ಬಸವಾದಿ ಶರಣರು ಜ್ಯೋತಿ ರೂಪದಲ್ಲಿ ಕಲ್ಯಾಣಕ್ಕೆ ಆಗಮಿಸಿದ್ದಾರೆ. ಕೂಡಲ ಸಂಗಮದ ಬಸವ ಧರ್ಮದ ಪರಮೋಚ್ಚ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ [illegible] ಮತ್ತೆ ಆರಂಭವಾಗಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಬಸವ

Digitalized by e-Sahithya Documentation Forum
Sponsored by Sarayu Foundation Trust

ಧರ್ಮ ಪೀಠದ ವತಿಯಿಂದ 3 ಎಕರೆ ಜಮೀನನ್ನು ಬಸವ ಕಲ್ಯಾಣದಲ್ಲಿ ಖರೀದಿಸಿ ಬಸವ ಮಹಾಮನೆಯನ್ನು ಸ್ಥಾಪಿಸಿದರು. ಮೇ 1 ಕಾಯಕ ದಿನದಂದು ಶರಣ ಭೂಮಿ ಬಸವ ಕಲ್ಯಾಣದಲ್ಲಿ ಬಸವ ಭಕ್ತರೆಲ್ಲರೂ ಕೂಡಿ ಶರಣ ವಂದನೆ ಮಾಡಿ ಬಸವಾದಿ ಶರಣರ ಸಂಕಲ್ಪ ಪೂರೈಸುವ ಘನ ಉದ್ದೇಶದಿಂದ "ಕಲ್ಯಾಣ ಪರ್ವ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪೂಜ್ಯ ಮಾತಾಜಿಯವರು ಸಂಕಲ್ಪಿಸಿದರು. ಷಡ್‌ಗಣಾಧೀಶರ ಪ್ರತೀಕವಾಗಿ ಆರು ಪ್ರಮುಖ ಶರಣ ಕ್ಷೇತ್ರಗಳಿಂದ ಜ್ಯೋತಿಗಳನ್ನು ತಂದು ಪ್ರಥಮ ಕಲ್ಯಾಣ ಪರ್ವ ಸಂದರ್ಭದಲ್ಲಿ ಕಲ್ಯಾಣ ಜ್ಯೋತಿ ಉದ್ದೀಪನಗೊಳಿಸಬೇಕೆಂಬುದು ಪೂಜ್ಯ ಮಾತಾಜಿಯವರ ಆಶಯವಾಗಿತ್ತು.

ಅದನ್ನು ನೆರವೇರಿಸಿಬಿಟ್ಟರು. 12ನೆಯ ಶತಮಾನದಲ್ಲಿ ಶರಣರು ಗುರು ಬಸವಣ್ಣನವರ ನೇತೃತ್ವದಲ್ಲಿ ಹೊಸ ಕ್ರಾಂತಿಯನ್ನು ಮಾಡಿದರು. ದುಷ್ಟಜಾತಿವಾದಿಗಳು ಅಂದು ಯಾವ ರೀತಿಯಾಗಿ ಶರಣರಿಗೆ ಕಿರುಕುಳ ಕೊಟ್ಟಿದ್ದರು ಎಂಬುದನ್ನು ಮೊದಲನೆಯ ಕಲ್ಯಾಣ ಪರ್ವ ಸಂದರ್ಭದಲ್ಲಿ ಮಂಚಣ್ಣನ ಉತ್ತರಾಧಿಕಾರಿಗಳು ನಮಗೆ ತೋರಿಸಿಕೊಟ್ಟಿದ್ದಾರೆ. 21ನೆಯ ಶತಮಾನದ ಪ್ರಜಾಪ್ರಭುತ್ವದ ಈ ಕಂಪ್ಯೂಟರ್ ಯುಗದಲ್ಲಿಯೇ ಜಾತಿವಾದಿ ದುಷ್ಟಶಕ್ತಿಯು ಇಷ್ಟೊಂದು ತೀವ್ರವಾಗಿರುವಾಗ, 12ನೆಯ ಶತಮಾನದ ಕಲ್ಯಾಣಕ್ರಾಂತಿಯ ಸಂದರ್ಭ ನೆನಪಿಸಿಕೊಂಡರೆ ಮೈರೋಮಾಂಚನಗೊಳ್ಳುತ್ತದೆ, ಭಯಾನಕವೆನಿಸುತ್ತದೆ. ನಿಸರ್ಗ ನಿಯಮದಂತೆ ಯಾವುದೇ ಒಂದು ಬದಲಾವಣೆ ತರುವಾಗ ಘರ್ಷಣೆ ಆಗುವುದು ಸಹಜ. ಕೊಡದ ಮೂಲಕ ಬಾವಿಯೊಳಗಿನ ನೀರನ್ನು ಮೇಲೆತ್ತಿಕೊಳ್ಳುತ್ತೇವೆ. ಕೊಡದಲ್ಲಿ ನೀರು ತುಂಬುವಾಗ "ಬುಡು ಬುಡು" ಶಬ್ದ ಉಂಟಾಗುತ್ತದೆ. ಕಾರಣ ಕೊಡದೊಳಗಿನ ಗಾಳಿಯು ಹೊರಹೋಗುತ್ತಿರುತ್ತದೆ. ಹೊರಗಿನ ನೀರು ಕೊಡದೊಳಗೆ ಹೋಗಲು ಯತ್ನಿಸುತ್ತದೆ. ಗಾಳಿ ಮತ್ತು ನೀರು ಎರಡರ ಘರ್ಷಣೆಯಿಂದಾಗಿ "ಬುಡು ಬುಡು" ಎಂಬ ಶಬ್ದ ಉಂಟಾಗುತ್ತದೆ. ಇದು ವೈಜ್ಞಾನಿಕ ಸತ್ಯ.

ಇದನ್ನೇ ನಾವು ಕಲ್ಯಾಣ ಪರ್ವಕ್ಕೆ ತುಲನಾತ್ಮಕವಾಗಿ ನೋಡಿದಾಗ ಅಕ್ಷರಶಃ ಸತ್ಯವೆನಿಸುತ್ತದೆ. ಪರಮ ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಲಕ್ಷಾಂತರ ಶರಣ ಚೇತನಗಳೊಂದಿಗೆ ದಿವ್ಯ ಬೆಳಕು ಕಲ್ಯಾಣದಲ್ಲಿ ಪ್ರವೇಶ ಮಾಡುತ್ತಿರುವಾಗ ಎಂಟು ನೂರು ವರುಷಗಳಿಂದ ಭದ್ರವಾಗಿ ಮನೆ ಮಾಡಿ ಕುಳಿತಿರುವ ದುಷ್ಟ ಶಕ್ತಿಯು ಕಲ್ಯಾಣದಿಂದ ಓಡಿ ಹೋಗಲು ಧಾವಿಸುತ್ತಿದೆ. ಆದ್ದರಿಂದ ಘರ್ಷಣೆ ಸಹಜ. ಕೊಡದಲ್ಲಿ ಪೂರ್ತಿ ನೀರು ತುಂಬಿದಾಗ ಶಬ್ದ ಅಡಗುವಂತೆ ಜ್ಯೋತಿಯು ಕಲ್ಯಾಣದಲ್ಲಿ ಪ್ರವೇಶ ಮಾಡುತ್ತಿದಂತೆಯೇ ಘರ್ಷಣೆ, ಗೊಂದಲ ನಿಂತುಹೋಗಿದೆ. ಕಲ್ಯಾಣಜ್ಯೋತಿ ಉದ್ದೀಪನವಾಗುವ ಮುಂಚೆ ವಿರೋಧ-ಘರ್ಷಣೆ ಇತ್ತು. ಈಗ ಅದೆಲ್ಲವೂ ಶಾಂತವಾಗಿದೆ. ಬಸವಾದಿ ಶರಣರ ದಿವ್ಯ ಬೆಳಕು ಕಲ್ಯಾಣ ಪ್ರವೇಶಿಸಿದಾಕ್ಷಣವೇ ಕತ್ತಲೆಯು ಕಣ್ಮರೆಯಾಗಿದೆ. ಕಲ್ಯಾಣಜ್ಯೋತಿಯು ಪ್ರಜ್ವಲಮಾನವಾಗಿ ಬೆಳಗುತ್ತಿದೆ. ಕಳೆದ ಏಪ್ರಿಲ್ 30, ಮೇ 1 ಮತ್ತು 2 ರಂದು ಮೂರು

ದಿನಗಳ ಕಾಲ ಅತ್ಯಂತ ಯಶಸ್ವಿಯಾಗಿ 2 ನೆಯ ಕಲ್ಯಾಣ ಪರ್ವ ಜರುಗಿದೆ. ಕಳೆದ ವರ್ಷ ಪ್ರಥಮ ಕಲ್ಯಾಣ ಪರ್ವಕ್ಕೆ ಬಂದು, ಕೊಂಡೆ ಮಂಚಣ್ಣಗಳ ಸಂತತಿಯವರ ಕಿರುಕುಳದಿಂದಾಗಿ ನೊಂದು ವಾಪಸ್ಸು ಹೋಗಿದ್ದ ಶರಣರೆಲ್ಲರೂ ಈ ಸಲದ ಕಲ್ಯಾಣ ಪರ್ವಕ್ಕೆ ಮರಳಿ ಬಂದು ಆನಂದದಿಂದ ಭಾಗವಹಿಸಿದರು. ಅಪ್ಪ ಬಸವಣ್ಣನವರ ಮಹಾಮನೆಯಲ್ಲಿ ಹಾಡಿ-ಪಾಡಿ ನಲಿದಾಡಿ ಪರಮಾನಂದವನ್ನು ಅನುಭವಿಸಿದರು. ಬಸವ ತತ್ತ್ವ ತರಬೇತಿ ಕಮ್ಮಟ ಮತ್ತು 2 ನೆಯ ಕಲ್ಯಾಣ ಪರ್ವದ ಸಮಗ್ರ ವರದಿ ಇಲ್ಲಿದೆ.

2 ನೆಯ ಕಲ್ಯಾಣ ಪರ್ವದ ನಿಯೋಜಿತ ಕಾರ್ಯಕ್ರಮದಂತೆ ದಿ. ಏಪ್ರಿಲ್ 30 ರಂದು ಬೆಳಿಗ್ಗೆ 8 ಗಂಟೆಗೆ ಬಸವ ಜ್ಞಾನ ಮಂಟಪದಲ್ಲಿ ನಿರ್ಮಿಸಲಾದ ಹುತಾತ್ಮ ಶರಣ ಹರಳಯ್ಯ ವೇದಿಕೆಯನ್ನು ಸಾಮೂಹಿಕ ಇಷ್ಟಲಿಂಗ ಪೂಜೆ ಮತ್ತು ಶ್ರೀ ಬಸವೇಶ್ವರ ಪೂಜಾವ್ರತ ಮಾಡಿ ದೈವೀಕರಿಸಲಾಯಿತು. ಬೆಳಗಿನ 10 ಗಂಟೆಗೆ ಲಕ್ಷಾಂತರ ಶರಣ-ಶರಣೆಯರು ಸ್ವಾಗತ-ಜಯಘೋಷಣೆಯೊಂದಿಗೆ ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿ, ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ ಹಾಗೂ ಷಡ್‌ಗಣಾಧೀಶರನ್ನು ವೇದಿಕೆಗೆ ಬರಮಾಡಿಕೊಂಡರು. ವೇದಿಕೆಗೆ ಬರುವ ಮುನ್ನವೇ ಪೂಜ್ಯ ಮಾತಾಜಿಯವರು ಬಸವ ಮಹಾಮನೆಯ ಮುಂಭಾಗದಲ್ಲಿ ನಿರ್ಮಿಸಲಾಗಿರುವ ವೀರಗಣಾಚಾರಿ ಮಡಿವಾಳ ಮಾಚಿದೇವ ಮಹಾದ್ವಾರವನ್ನು ಅನಾವರಣಗೊಳಿಸಿದರು. ಕೂಡಲ ಸಂಗಮದಿಂದ ಬಂದ ಬಸವ ಜ್ಯೋತಿ, ಬಳ್ಳಿಗಾವಿಯಿಂದ ಬಂದ ಅಲ್ಲಮಪ್ರಭು ಜ್ಯೋತಿಗಳನ್ನು ಒಳಗೊಂಡಂತೆ 12 ಜ್ಯೋತಿಗಳನ್ನು ದಿ. 29 ರಂದು ಪೂಜ್ಯ ಮಾತಾಜಿಯವರು ಮಹಾಮನೆಗೆ ಹಾರ್ದಿಕವಾಗಿ ಬರಮಾಡಿಕೊಂಡು ಆ ಎಲ್ಲ ಜ್ಯೋತಿಗಳಿಂದ ಕಲ್ಯಾಣ ಜ್ಯೋತಿಯ ಪುನರುದ್ದೀಪನ ಮಾಡಿದ ದೃಶ್ಯ ಹೃದಯಂಗಮನವಾಗಿತ್ತು. ಮೊದಲನೆಯ ದಿವಸ ವೇದಿಕೆಯ ಮೇಲಿಟ್ಟು ಪೂಜಿಸಲಾದ ಬಸವ ಮೂರ್ತಿಯನ್ನು ಬಸವ ಮಹಾಮನೆಯ ಶರಣ ಶೈಲದಲ್ಲಿ ನಿರ್ಮಿಸಲಾಗಿರುವ ಶ್ರೀ ಬಸವೇಶ್ವರ ಧ್ಯಾನ ಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಕಲ್ಯಾಣ ಪರ್ವವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಮೊದಲಿಗೆ ಬಸವ ಧ್ವಜಾರೋಹಣ ಮಾಡಲಾಯಿತು. ಪ್ರವಚನ ಪಿತಾಮಹರಾದ ಪೂಜ್ಯ ಲಿಂ|| ಲಿಂಗಾನಂದ ಮಹಾಸ್ವಾಮೀಜಿಗಳು ಪ್ರವಚನ ಮಾಡುತ್ತಿರುವ ಭಂಗಿಯಲ್ಲಿಯೇ ನಿರ್ಮಿಸಲಾದ ಮೂರ್ತಿಯನ್ನು ಈ ಸಂದರ್ಭದಲ್ಲಿ ಅಮೆರಿಕದ ಯುನಿವರ್ಸಲ್ ಸೆಂಟರ್ ಆಫ್ ಬಸವ ಫಿಲಾಸಫಿ ಸಂಸ್ಥೆಯ ಕಾರ್ಯದರ್ಶಿ ಹಾಗೂ ಪೂಜ್ಯ ಮಾತಾಜಿಯವರಿಂದ ದೀಕ್ಷೆ ಪಡೆದ ಧರ್ಮಪ್ರಚಾರಕಿ ಮಾತೆ ಯೋಗೀಶ್ವರಿ(ರೂಪಕ) ಅನಾವರಣಗೊಳಿಸಿದರು. ಅಪ್ಪಾಜಿಯವರನ್ನು ಕಂಡ ಕೂಡಲೇ ನೆರೆದ ಲಕ್ಷಾಂತರ ಭಕ್ತರು ಚಪ್ಪಾಳೆ ತಟ್ಟಿ ಆನಂದಭಾಷ್ಪ ಸುರಿಸಿದರು.

ಹನ್ನೆರಡು [illegible] ಗುಲಬರ್ಗಾದ ಶರಣ. ಚಂದ್ರಶೇಖರ್

Digitalized by e-Sahithya Documentation Forum
Sponsored by Sarayu Foundation Trust

ಗೊಬ್ಬರಕರ್ ಹಾಗೂ ಬೀದರ ವಿದ್ಯಾಕೇಂದ್ರದ ಅಧ್ಯಕ್ಷ ಶಾಂತಪ್ಪ ಜೆ. ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ॥ ರಾಜೇಂದ್ರ ಪಾಟೀಲ ನಿರ್ಣಾ ಗ್ರಂಥ ಪುಷ್ಪಾರ್ಪಣೆ ಮಾಡಿದರು. ಮೊದಲಿಗೆ ಡಾ॥ ವಿ. ಸುಶೀಲಮ್ಮ ಬೆಂಗಳೂರು, ದೇವಿಕಾ ಶರಣಪ್ಪ, ಚಂದ್ರಮ್ಮ ಪಾಟೀಲ ಬೀದರ್, ಮಾಲೂತಾಯಿ ಲಿಂಗಾಯತ, ಲಕ್ಷ್ಮೀಬಾಯಿ ಪಾಂಡ್ರೆ ಗುರುಬಸವಣ್ಣನವರ ಪೂಜೆ ನೆರವೇರಿಸಿದರು.

ಶರಣರಿಗೆ ಶರಣಾರ್ಥಿ ಹೃದಯಸ್ಪರ್ಶಿ ಕಾರ್ಯಕ್ರಮ
ಕಾಯಕಕ್ಕೆ ದೈವತ್ವದ ಪಟ್ಟ ಕಟ್ಟಿದವರು ಬಸವಣ್ಣನವರು

ಬಸವ ಕಲ್ಯಾಣ, ಮೇ : ಕಾಯಕಕ್ಕೆ ಕೇವಲ ಗೌರವತ್ವ ಮಾತ್ರವಲ್ಲ, ದೈವತ್ವದ ಪಟ್ಟವನ್ನು ಕಟ್ಟಿದ ಜಗತ್ತಿನ ಏಕೈಕ ಪ್ರವಾದಿ ಗುರು ಬಸವಣ್ಣನವರು. ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ನೀಡಿದ ಮಂತ್ರಪುರುಷ ಬಸವಣ್ಣನವರ ಕಾರ್ಯಕ್ಷೇತ್ರ ಶರಣ ಭೂಮಿ ಬಸವ ಕಲ್ಯಾಣ. ಈ ಪವಿತ್ರವಾದ ಶರಣ ಭೂಮಿಯಲ್ಲಿ ವರ್ಷಕ್ಕೆ ಒಂದು ಸಾರಿ ಬಸವ ಭಕ್ತರೆಲ್ಲರೂ ಮೇ ತಿಂಗಳ ದಿ. 1 ರಂದು ಒಟ್ಟಿಗೆ ಸೇರಿ ಸೃಷ್ಟಿಕರ್ತನನ್ನು ಮತ್ತು ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ-ಕೊಂಡಾಡುವ ಉದ್ದೇಶದಿಂದ ಮತ್ತು 12ನೆಯ ಶತಮಾನದ ಎಲ್ಲ ಶರಣರಿಗೆ ಶರಣಾರ್ಥಿ ಸಲ್ಲಿಸುವುದಕ್ಕಾಗಿ ಕಲ್ಯಾಣ ಪರ್ವ ನಡೆಸಲಾಗುತ್ತಿದೆ ಎಂದು ಕಲ್ಯಾಣ ಪರ್ವದ ರೂವಾರಿಗಳೂ, ಬಸವ ಧರ್ಮ ಪೀಠಾಧ್ಯಕ್ಷರೂ ಆದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಕಲ್ಯಾಣ ಪರ್ವದ ವಿಶೇಷ ಕಾರ್ಯಕ್ರಮವಾದ "ಶರಣ ವಂದನೆ" ಸಮಾರಂಭದ ದಿವ್ಯ ಸನ್ನಿಧಿ ವಹಿಸಿ ಪೂಜ್ಯರು ಆಶೀರ್ವಚನ ನೀಡಿದರು. ಗುರು ಬಸವಣ್ಣನವರ ಕುರಿತು ಸಿದ್ಧರಾಮೇಶ್ವರರು ರಚಿಸಿದ ಬಸವ ಸ್ತೋತ್ರ ತ್ರಿವಿಧಿ ಪವಿತ್ರ ಗ್ರಂಥ ಪಾರಾಯಣವು ಬಸವ ಧರ್ಮ ಪೀಠದ ಷಡ್‌ಗಣಾಧೀಶರಿಂದ ಜರುಗಿತು. ಕಾರ್ಯಕ್ರಮಕ್ಕೂ ಮುಂಚೆ ಬಸವ ಮಹಾಮನೆಯಿಂದ ವೇದಿಕೆಯವರೆಗೆ ಪೂಜ್ಯ ಮಾತಾಜಿಯವರೊಂದಿಗೆ ಪಥ ಸಂಚಲನ ಜರುಗಿತು. ಗಣಾಚಾರ ದಳದ ವಾದ್ಯವೃಂದದೊಂದಿಗೆ ಪೂಜ್ಯ ಮಾತಾಜಿಯವರನ್ನು ವೇದಿಕೆಗೆ ಬರಮಾಡಿಕೊಳ್ಳಲಾಯಿತು.

ವೇದಿಕೆಯ ಮೇಲೆ ಗುರು ಬಸವಣ್ಣನವರ ಪೂಜೆಯನ್ನು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಮತ್ತು ಅಮೆರಿಕದ ಬಸವ ಧರ್ಮ ಪ್ರಚಾರಕಿ ಮಾತೆ ಯೋಗೀಶ್ವರಿಯವರು ನೆರವೇರಿಸಿದರು. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಬಸವ ಧ್ವಜಾರೋಹಣ ನೆರವೇರಿಸಿದರು.

ಪರಮ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರು ಪ್ರವಚನ ನೀಡುತ್ತ, ಮಾತೃ

Digitalized by e-Sahithya Documentation Forum
Sponsored by Sarayu Foundation Trust

ಹೃದಯಿಗಳಾದ ಬಸವಣ್ಣನವರು ಎಲ್ಲವರೂ ನನ್ನವರು, ಎಂಥವರೂ ನನ್ನವರು ಎಂದು ಎಲ್ಲರನ್ನು ಇಂಬಿಟ್ಟುಕೊಂಡರು. ಕಾಯಕದ(ಶ್ರಮದ) ಮಹತ್ವವನ್ನು ನಮಗೆ ತಿಳಿಸಿಕೊಟ್ಟ ಸೃಷ್ಟಿಕರ್ತನನ್ನು ಪರಿಚಯಿಸಿದ ಮಹಾಗುರು ಬಸವಣ್ಣನವರಿಗೆ ನಾವು ಎಷ್ಟೇ ಋಣ ತೀರಿಸಿದರೂ ಕಡಿಮೆಯೆ. ಬಸವಾದಿ ಶರಣರ ಋಣವನ್ನು ತೀರಿಸಲು ನಾವೆಲ್ಲರೂ ತ್ಯಾಗ-ಸಮರ್ಪಣೆಯಿಂದ ದುಡಿಯಬೇಕಾಗಿದೆ ಎಂದು ನುಡಿದರು.

ಬೆಂಗಳೂರು ಗಣಾಚಾರ ದಳದ ಅಧ್ಯಕ್ಷ ಶರಣ. ಚಂದ್ರಮೌಳಿ ಸ್ವಾಗತ ಕೋರಿದರು, ಧಾರವಾಡದ ಶರಣ. ಸದಾನಂದ ಸ್ವಾಮಿಯವರು ಕಾರ್ಯಕ್ರಮ ನಿರ್ವಹಿಸಿದರು.

ಬೀದರ ರಾಷ್ಟ್ರೀಯ ಬಸವ ದಳದ ಮಕ್ಕಳು ವಚನ ನೃತ್ಯ ನಡೆಸಿದರು. ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಸಿದ್ಧರಾಮೇಶ್ವರಾನಂದ ಸ್ವಾಮಿಗಳು, ಗಣನಾಯಕ-ನಾಯಕಿಯರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಭಾವೈಕ್ಯತಾ ಗೋಷ್ಠಿ

ಗುರು ಬಸವಣ್ಣನವರ ಬಹುಮುಖ ವ್ಯಕ್ತಿತ್ವ ಹಾಗೂ ಅವರ ಅಪ್ರತಿಮ ಸಾಧನೆಯ ಕುರಿತು ಬಣ್ಣಿಸಲು ಸಾವಿರ ನಾಲಿಗೆ ಸಾಲವು. ಇಡೀ ಜಗತ್ತಿನಲ್ಲಿ ಗುರು ಬಸವಣ್ಣನವರಂಥ ಮಹಾನ್ ವ್ಯಕ್ತಿಗಳನ್ನು ಕಾಣಲು ಸಾಧ್ಯವಿಲ್ಲ. ತಾವು ಮುಕ್ತಿ ಹೊಂದುವುದು ಮಾತ್ರವಲ್ಲದೆ ಏಕಕಾಲಕ್ಕೆ ತಮ್ಮೊಂದಿಗೆ 770 ಜನ ಶರಣ-ಶರಣೆಯರನ್ನು ಮುಕ್ತಾತ್ಮರನ್ನಾಗಿ ಮಾಡಿದ ಮಹಾನ್ ಪ್ರವಾದಿ ಗುರು ಬಸವಣ್ಣನವರು. ಇವನಾರವ, ಇವನಾರವನೆಂದು ಭೇದವನೆಣಿಸದೆ, ಇವನಮ್ಮವ, ಇವನಮ್ಮವನೆಂದು ಎಲ್ಲರನ್ನು ಇಂಬಿಟ್ಟುಕೊಂಡ ಮಾತೃಹೃದಯಿ ಗುರು ಬಸವಣ್ಣನವರು. ಭಾವೈಕ್ಯತೆಯನ್ನು ಸಾಧಿಸಿ ಸಮತಾವಾದದ ಕಲ್ಯಾಣ ರಾಜ್ಯವನ್ನು ನಿರ್ಮಾಣ ಮಾಡಿದ್ದರು ಎಂದು ಭದ್ರಾವತಿ ರಾಷ್ಟ್ರೀಯ ಬಸವ ದಳದ ಶರಣೆ. ಗಂಗಾಂಬಿಕೆ ಬಸವರಾಜ ನುಡಿದರು.

ದಿ.30 ರಂದು ಸಾಯಂಕಾಲ 6 ಗಂಟೆಗೆ ಜರುಗಿದ ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿಯಲ್ಲಿ "ಬಸವಣ್ಣನವರ ಕಲ್ಯಾಣ ರಾಜ್ಯದ ಪರಿಕಲ್ಪನೆ" ಕುರಿತು ಮಾತನಾಡುತ್ತ ಅಂದು ಬಸವಣ್ಣನವರು ಕಟ್ಟಿದ ಕಲ್ಯಾಣ ರಾಜ್ಯದ ಪುನಃ ಸ್ಥಾಪನೆಗಾಗಿಯೇ ಪೂಜ್ಯ ಲಿಂಗಾನಂದ ಅಪ್ಪಾಜಿ ಹಾಗೂ ಪೂಜ್ಯ ಮಾತಾಜಿಯವರು ಅವತರಿಸಿ ಬಂದಿದ್ದಾರೆ ಎಂದು ಮಾರ್ಮಿಕವಾಗಿ ಮಾತನಾಡಿದರು. ಶುದ್ಧ ಕಾವ್ಯಮಯವಾದ ತಮ್ಮ ಮಾತಿನ ಶೈಲಿಯಿಂದ ಶರಣೆ ಗಂಗಾಂಬಿಕೆಯವರು ಸಭಿಕರನ್ನು ಸಮ್ಮೋಹನಗೊಳಿಸಿದರು.

ಗುರು ಬಸವಣ್ಣನವರು ಕಟ್ಟಿದ ಕಲ್ಯಾಣ ರಾಜ್ಯದಲ್ಲಿ ಕೇವಲ ಆರ್ಥಿಕ ಸಮಾನತೆ

ಅಥವಾ ಸಾಮಾಜಿಕ ಸಮಾನತೆ ಮಾತ್ರವಲ್ಲದೆ, ಪ್ರತಿಯೊಬ್ಬ ಮಾನವನಿಗೂ ಧರ್ಮ ಸಂಸ್ಕಾರ ಹಾಗೂ ದೇವರನ್ನು ಪೂಜಿಸುವ ಅಧಿಕಾರವನ್ನು ಕೊಟ್ಟು ಜಾತಿ-ಮತ ಭೇದವನೆಣಿಸದೆ ಸರ್ವರಿಗೂ ಇಷ್ಟಲಿಂಗ ದೀಕ್ಷೆಯನ್ನು ನೀಡಿದರು. ಧರ್ಮಸಹಿತವಾದ ದೈವೀರಾಜ್ಯವನ್ನು ಅವರು ಕಟ್ಟಿದರು ಎಂದು ಗೋಷ್ಠಿಯ ಉದ್ಘಾಟನೆ ನೆರವೇರಿಸಿದ ಬಸವ ಧರ್ಮ ಪೀಠದ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೀದರಿನ ದಲಿತ ನಾಯಕ ಪಾಂಡುರಂಗ ಸೂರ್ಯವಂಶಿಯವರು ಮಾತನಾಡಿ, ಇಂದು ಕರ್ನಾಟಕದ ಎಲ್ಲ ಮಠಾಧೀಶರು ಸೇರಿದರೂ ಪೂಜ್ಯ ಮಾತಾಜಿಯವರ ಸಮ ಆಗಲಾರರು. ಕಾರಣ ಇಲ್ಲಿ ನಿಸ್ವಾರ್ಥ ಸೇವೆಯಿದೆ. ಪೂಜ್ಯ ಮಾತಾಜಿಯವರಲ್ಲಿ ತ್ಯಾಗವಿದೆ. ತ್ಯಾಗದಿಂದ ಮಾತ್ರ ಸಮಾಜ ಕಟ್ಟಲು ಸಾಧ್ಯವಿದೆಯೇ ವಿನಃ ದ್ವೇಷ-ಮತ್ಸರದಿಂದಲ್ಲ. ಎಲ್ಲ ಮಠಾಧೀಶರು, ರಾಜಕಾರಣಿಗಳು ಮಾತಾಜಿಯವರ ಬಗ್ಗೆ ಮತ್ಸರ ಪಡುವುದನ್ನು ಬಿಟ್ಟು ಇವರು ಮಾಡುವ ಕಾರ್ಯಸಾಧನೆ ಕಂಡು ಸಂತೋಷ ಪಡಬೇಕೆಂದು ಕಿವಿಮಾತು ಹೇಳಿದರು.

ಬಸವ ಕಲ್ಯಾಣದ ಆದಿಜಾಂಬವ ಸಮಾಜ ಅಧ್ಯಕ್ಷ ಯುವರಾಜ ಬೆಂಡೆ ಅತಿಥಿಗಳಾಗಿ ಆಗಮಿಸಿದ್ದರು. ಬಿಜಾಪುರ ಕೃಷಿ ಅಧಿಕಾರಿಗಳಾದ ಶರಣ. ಸಿ. ಬಿ. ಬೇವನೂರ, ಬೆಳಗಾವಿಯ ಎಲ್.ಐ.ಸಿ ಅಧಿಕಾರಿಗಳಾದ ಶರಣ. ಕೆ. ಬಸವರಾಜು ಅವರು ಬಸವಣ್ಣನವರು ಮತ್ತು ಭಾವೈಕ್ಯತೆ ಕುರಿತು ಉಪನ್ಯಾಸ ನೀಡಿದರು. ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ. ಶಂಕರಪ್ಪ ಮಹಾಂತಗೋಳ್ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಶರಣೆ. ಚಂದ್ರಮ್ಮ ಸದಾನಂದ ಸ್ವಾಮಿ ಅವರು ಕಾರ್ಯಕ್ರಮ ನಿರ್ವಹಿಸಿದರು.

" ಶಿಸ್ತು-ಏಕರೂಪತೆ ಇದ್ದಾಗ ಮಾತ್ರ ಧರ್ಮ ಬೆಳೆಯಲು ಸಾಧ್ಯ " - ಮಾತಾಜಿ

ಯಾವ ಧರ್ಮದಲ್ಲಿ ಶಿಸ್ತು ಮತ್ತು ಏಕರೂಪತೆಯಿದೆಯೋ ಆ ಧರ್ಮ ಮಾತ್ರ ಬೆಳೆಯಲು ಸಾಧ್ಯ. ಮಿಲಿಟರಿ ತರಹ ಇರಬೇಕು. ಧರ್ಮಗುರುವಿನಲ್ಲಿ ಶ್ರದ್ಧೆ-ಭಕ್ತಿ ಹೊಂದಬೇಕು. ಆದರೆ ಲಿಂಗಾಯತರಲ್ಲಿ ಕೆಲವು ಅಜ್ಞಾನಿ ಜನಗಳು ಬಸವ ಜಯಂತಿಯ ದಿವಸ "ಗಜ ಮುಖನೇ ಗಣಪತಿಯೇ ನಿನಗೆ ವಂದನೆ" ಎಂದು ಹಾಡುವವರೂ ಇದ್ದಾರೆ. ಮೊಟ್ಟ ಮೊದಲು ಗಣಪತಿ ಪೂಜೆ ಮಾಡಬೇಕೆಂಬುದು ನಿಜ. ಆದರೆ ಆಯಾ ಧರ್ಮದ ಗಣಪತಿ ಬೇರೆ ಬೇರೆ ಇರುತ್ತಾರೆ. ಗಣ ಅಂದರೆ ಸಮೂಹ ಅಥವಾ ಸಮಾಜ, ಪತಿ ಎಂದರೆ ಒಡೆಯ ಅಥವಾ ನಾಯಕ ಎಂದರ್ಥ. ಬೌದ್ಧರಿಗೆ ಬುದ್ಧ ಗಣಪತಿಯಾದರೆ, ಜೈನರಿಗೆ ಮಹಾವೀರ, ಮುಸ್ಲಿಂರಿಗೆ ಪೈಗಂಬರ್, ಕ್ರೈಸ್ತರಿಗೆ ಏಸು ಕ್ರಿಸ್ತ ಗಣಪತಿಯಾದರೆ ಲಿಂಗಾಯತ

Digitalized by e-Sahithya Documentation Forum
Sponsored by Sarayu Foundation Trust

ಧರ್ಮೀಯರಿಗೆ ಗುರು ಬಸವಣ್ಣನವರೇ ಗಣಪತಿ ಅಥವಾ ಆದಿ ಪ್ರಥಮರು ಎಂಬುದನ್ನು ಲಿಂಗಾಯತರು ಅರಿಯಬೇಕೆಂದು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಕರೆಕೊಟ್ಟರು.

ಅವರು ಮೇ. ದಿ. 1ರಂದು ಕಾಯಕ ದಿನದಂದು ಸಂಜೆ 7 ಗಂಟೆಗೆ ಜರುಗಿದ ಧರ್ಮ ಚಿಂತನಗೋಷ್ಠಿಯ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಎಲ್ಲ ರಾಜ್ಯ ಸೇರಿ ಲಿಂಗಾಯತ ಸಮಾಜದಲ್ಲಿ 431 ಉಪ ಪಂಗಡಗಳಿವೆ. "ವೀರಶೈವ" ಎನ್ನುವುದು ಕೂಡ ಒಂದು ಉಪ ಪಂಗಡವೇ ಆಗಿದೆ. ಇಂಥ ಒಂದು ಸಣ್ಣ ಉಪಪಂಗಡವಾದ ವೀರಶೈವ ಪದವನ್ನು "ಲಿಂಗಾಯತ " ಶಬ್ದಕ್ಕೆ ಸಮೀಕರಿಸುವುದು ಮಹಾ ಅಪರಾಧ. ಲಿಂಗಾಯತ ಸಮಾಜ ಹಾಳಾಗಿದ್ದೇ ವೀರಶೈವ ಮಹಾಸಭಾದಿಂದ. ಜೇನು ತುಪ್ಪದಂತಿರುವ ವಚನ ಸಾಹಿತ್ಯದ ಬಾಟಲ್‌ಗೆ "ವೀರಶೈವ" ಎಂಬ ಹರಳೆಣ್ಣೆಯ ಲೇಬಲ್ ಹಚ್ಚಿ ವಚನ ಸಾಹಿತ್ಯದ ಪ್ರಚಾರ ಆಗದಂತೆ ಮಾಡಿದವರು ವೀರಶೈವ ಮಹಾಸಭೆಯವರು. ನಾವೀಗ ವೀರಶೈವ ಎಂಬ ಲೇಬಲ್‌ನ್ನು ಕಿತ್ತೆಸೆದು ಲಿಂಗಾಯತ ಧರ್ಮದ ನೈಜ ಸಿದ್ಧಾಂತ ಏನೆಂಬುದನ್ನು ಜಗತ್ತಿಗೆ ತೋರಿಸುತ್ತಿದ್ದೇವೆ "ಎಂದು ಪೂಜ್ಯ ಮಾತಾಜಿ ನುಡಿದರು.

ವಿಶ್ವ ಕಾಯಕ ದಿನದ ನಿಮಿತ್ತ ಗುರು ಬಸವಣ್ಣನವರ ಹಾಗೂ ವೀರಗಣಾಚಾರಿ ಮಡಿವಾಳ ಮಾಚಿದೇವರ ಪೂಜೆ ನೆರವೇರಿಸಿದವರು. ಹುಡಗಿ ಗ್ರಾಮದ ಶರಣ. ಕಂಟೆಪ್ಪ ದಾನಾ ಹಾಗೂ ಕುಟುಂಬದವರು. ಬಿ.ಎಸ್.ಎಸ್.ಕೆ ನಿರ್ದೇಶಕರಾದ ಶರಣ. ದಾನಾ ಅವರು ಮಾತನಾಡಿ ಪೂಜ್ಯ ಮಾತಾಜಿಯವರು ಮಾಡುವ ಧರ್ಮ ಕಾರ್ಯಕ್ಕೆ ಯಾವತ್ತೂ ನಮ್ಮ ಬೆಂಬಲ ಸಹಾಯ-ಸಹಕಾರವಿದೆ ಎಂದು ಹೇಳಿದರಲ್ಲದೆ ಪೂಜ್ಯ ಮಾತಾಜಿಯವರು ಒಂದೇ ವರ್ಷದಲ್ಲಿ ಬಸವ ಮಹಾಮನೆಯನ್ನು ಈ ರೀತಿಯಾಗಿ ಅಭಿವೃದ್ಧಿ ಪಡಿಸಿರುವುದು ಶ್ಲಾಘನೀಯ ಎಂದರು.

ಹಿರಿಯ ಸ್ವಾತಂತ್ರ ಹೋರಾಟಗಾರರಾದ ಭಾಲ್ಕಿಯ ಶರಣ. ಮಾದಪ್ಪ ಲೋಖಂಡೆ ಮತ್ತು ಸಚಿವರಾದ ಶರಣ. ಸುಭಾಷ ಅಷ್ಟೂರೆಯವರು ಮಾತನಾಡಿ ಪೂಜ್ಯ ಮಾತಾಜಿಯವರು ಕೇವಲ ವ್ಯಕ್ತಿಯಾಗಿರದೆ, ಒಂದು ದೈವೀಶಕ್ತಿಯ ಸಾಕಾರವಾಗಿದ್ದಾರೆ, ಅವರ ಕಾರ್ಯಗಳಿಗೆ ಸದಾ ನಮ್ಮ ಬೆಂಬಲವಿದೆ ಎಂದು ಹೇಳಿದರು. ಕ್ರಾಂತಿ ಪತ್ರಿಕೆಯ ವರದಿಗಾರರಾದ ಶರಣ. ವಿಜಯಕುಮಾರ ಜೋಳಿಗೆ ಅವರು ಉಪನ್ಯಾಸ ನೀಡಿ ಸ್ವತಂತ್ರ ಭಾರತದ ಸಂವಿಧಾನದಲ್ಲಿರುವ ಅನೇಕ ಕಾಯ್ದೆಗಳನ್ನು ಆಚರಣೆಯಲ್ಲಿ ತರಲಿಕ್ಕೆ ಈಗಲೂ ಸಾಧ್ಯವಾಗುತ್ತಿಲ್ಲ. ನಮ್ಮ ರಾಜಕಾರಣಿಗಳು ಒದ್ದಾಡುತ್ತಿದ್ದಾರೆ. ಆದರೆ ಎಂಟುನೂರು ವರ್ಷಗಳ ಪೂರ್ವದಲ್ಲಿಯೇ ಗುರು ಬಸವಣ್ಣನವರು ಮಹಿಳೆಯರಿಗೆ ಸರ್ವರಂಗದಲ್ಲಿ [illegible] ಅಧಿಕಾರ, ಸಮಾನತೆ, ಆರ್ಥಿಕ, ಸಾಮಾಜಿಕ ಸಮಾನತೆ, ಸಂಪೂರ್ಣ ಸಾಕ್ಷರತೆ

ಎಲ್ಲವನ್ನೂ ಸಾಧಿಸಿ ಸರ್ವಾಂಗ ಸುಂದರವಾದ ಸಮಾಜವನ್ನು ನಿರ್ಮಿಸಿದ್ದರು ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಶರಣ. ಸಿದ್ಧರಾಮಪ್ಪ ಪಾಟೀಲ ಯರಮರಸ್ ಅವರು ಸಂಪಾದಿಸಿದ "ವೇದಕ್ಕೆ ಒರೆಯ ಕಟ್ಟುವೆ" ಪುಸ್ತಕವನ್ನು ಅವರು ಬಿಡುಗಡೆ ಮಾಡಿದರು.

ಆಂಧ್ರಪ್ರದೇಶ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ. ಸುಭಾಷ ಪಾಟೀಲ ಅವರು ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳ ಪರಿಚಯ ಪುಸ್ತಕ "ಬಸವ ಚೇತನ "ಬಿಡುಗಡೆ ಮಾಡಿದರು. ಲೇಖಕರಾದ ಶರಣ. ಯೋಗೀಶ ನಿರ್ವಿಕಲ್ಪ ಹಾಗೂ ಸಿದ್ಧರಾಮಪ್ಪ ಪಾಟೀಲರನ್ನು ಪೂಜ್ಯ ಮಾತಾಜಿ ಆಶೀರ್ವದಿಸಿದರು.

ಬಸವ ಧರ್ಮವನ್ನು ಪ್ರಚಾರ ಮಾಡುವಾಗ ದುಷ್ಟರಿಂದ ಅನೇಕ ರೀತಿಯ ತೊಂದರೆಗಳು ಬರುತ್ತವೆ. ಅವನ್ನೆಲ್ಲ ನಾವು ಅತ್ಯಂತ ಶಾಂತರಾಗಿ ಸಹಿಸಿಕೊಂಡಿದ್ದೇವೆ. ಇನ್ನು ಮುಂದೆ ದುಷ್ಟರಿಗೆ ಪಾಠ ಕಲಿಸಲು ಗಣಾಚಾರಿಗಳಾಗಿ ಹೋರಾಡಲು ಮುಂದಾಗಬೇಕೆಂದು ಯುವ ಕಾರ್ಯಕರ್ತರಿಗೆ ಕರೆಕೊಟ್ಟರು. ಶರಣೆ. ವಚನ ಸುಧಾ, ಚಿತ್ರದುರ್ಗ, ಕಾರ್ಯಕ್ರಮ ನಿರ್ವಹಿಸಿದರು. ಶರಣ. ಶಿವನಾಥ ನೀಲಂಗೆ, ಬೀದರ್, ಗ್ರಂಥ ಪುಷ್ಪಾರ್ಪಣೆ ಮಾಡಿದರು. ಪೂಜ್ಯ ಮಾತಾಜಿಯವರು ಗೋಷ್ಠಿಯ ಉದ್ಘಾಟನೆ ಮಾಡಿದರು. ಪೂಜ್ಯರಾದ ಬಸವ ಕುಮಾರ ಸ್ವಾಮಿಗಳು, ಸಿದ್ಧೇಶ್ವರಾನಂದ ಸ್ವಾಮಿಗಳು, ಚಟ್ನಳ್ಳಿ ಸಮ್ಮುಖ ವಹಿಸಿದ್ದರು. ಪೂಜ್ಯ ಚನ್ನಬಸವರಾಜ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪುರಸಭಾ ಸದಸ್ಯ ಸಂಜೀವ ಸುಗೂರೆ, ನೂಲಿ ಚಂದಯ್ಯ ಸಮಾಜದ ಅಧ್ಯಕ್ಷ ಸಾಂಬಾಜಿ, ಭಾಲ್ಕಿ ಇಂಜಿನಿಯರ್ ಬಿರಾದಾರ ಮತ್ತು ಗಣನಾಯಕ ಗಣನಾಯಕಿಯರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಲ್ಯಾಣ ಪರ್ವದ ಬಹುಮುಖ್ಯವಾದ ಕಾರ್ಯಕ್ರಮವು ವಿಶ್ವ ಕಾಯಕ ದಿನ (ಮೇ 1) ರಂದು ಬೆಳಿಗ್ಗೆ 10-30ಕ್ಕೆ ಶರಣ ವಂದನೆ ಜರುಗಿತು. ಲಭ್ಯವಾಗಿರುವ ಸುಮಾರು ಮುನ್ನೂರು ಶರಣರ ಹೆಸರುಗಳನ್ನು ಹೇಳಿ ಪೂಜ್ಯ ಮಾತಾಜಿಯವರು ಶರಣು ಹೇಳಿದಾಗ ನೆರೆದ ಲಕ್ಷಾಂತರ ಬಸವ ಭಕ್ತರು "ಶರಣು ಶರಣಾರ್ಥಿ" ಎಂದು ಪುನರುಚ್ಚರಿಸಿದರು.

ಪೂಜ್ಯರಾದ ಮಾತೆ ನೀಲಗಂಗಾದೇವಿ ಹಾಗೂ ಮಾತೆ ಮಂಗಳಾದೇವಿಯವರು ಮೊದಲಿಗೆ ಗುರು ಬಸವಣ್ಣನವರ ಪೂಜೆ ನೆರವೇರಿಸಿದರು. ಪೂಜ್ಯರಾದ ಚನ್ನಬಸವಾನಂದ ಸ್ವಾಮಿಗಳು ಬಸವ ಧ್ವಜಾರೋಹಣ ನೆರವೇರಿಸಿದರು. ನಂತರ ಷಡ್‌ಗಣಾಧೀಶರು ಶ್ರೀ ಸಿದ್ಧರಾಮೇಶ್ವರ ವಿರಚಿತ(ಮಿಶ್ರ) ಶರಣ ಸ್ತೋತ್ರ ತ್ರಿವಿಧಿ ಪಠಣ ಮಾಡಿದರು. ಗಣಾಚಾರ ದಳದ ಅಧ್ಯಕ್ಷ ಶರಣ. ಚಂದ್ರಮೌಳಿ ಸ್ವಾಗತಿಸಿದರು. ಗಣನಾಯಕರಾದ ಶರಣ. ಬಸವರಾಜೇಂದ್ರಪ್ಪನವರು ಗ್ರಂಥ ಪುಷ್ಪಾರ್ಪಣೆ ಮಾಡಿದರು.

ಶೂನ್ಯ ಪೀಠಾರೋಹಣ

ಜಾತಿಯತೆಯ ಬೇರನ್ನು ಕಿತ್ತೆಸೆದು ಸ[illegible]ಧ್ವಜವನ್ನು ಹಾರಿಸಿದ ಗುರು

ಬಸವಣ್ಣನವರು ಜನ್ಮದಿಂದ ಯಾರೂ ಮೇಲಲ್ಲ, ಕೀಳಲ್ಲ; ಜ್ಞಾನ-ವೈರಾಗ್ಯದಿಂದ ಮಾತ್ರ ಶ್ರೇಷ್ಠರಾಗಲು ಸಾಧ್ಯವೆಂದು ಹೇಳಿ ಯಾರು ಬೇಕಾದರೂ ಅರ್ಹತೆಯುಳ್ಳವ ಗುರುವಾಗಬಹುದು, ಜಗದ್ಗುರುವಾಗಬಹುದು ಎಂಬುದನ್ನು ಸಾಧಿಸುವುದಕ್ಕಾಗಿಯೇ ಶೂನ್ಯ ಪೀಠದ ಸ್ಥಾಪನೆ ಮಾಡಲಾಯಿತು. 12ನೆಯ ಶತಮಾನದಲ್ಲಿ ಬಸವಣ್ಣನವರು ಮಾಡಿದ ಕಾರ್ಯವನ್ನೇ ಇಂದು ಪೂಜ್ಯ ಮಾತಾಜಿಯವರು ಮಾಡುತ್ತಿದ್ದಾರೆ. ಶೂನ್ಯ ಪೀಠದ ಪುನಃ ಸ್ಥಾಪನೆಯೂ ಸಹ ಮಾತಾಜಿಯವರಿಂದಲೇ ಆಗಬೇಕಾದರೆ ಇದೆಲ್ಲವೂ ಗುರುಬಸವಣ್ಣನವರ ಸಂಕಲ್ಪವೇ ಆಗಿದೆ ಎಂದು ವಿಶ್ವದ ದ್ವಿತೀಯ ಮಹಿಳಾ ಜಗದ್ಗುರುಗಳೂ, ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ನುಡಿದರು.

ದಿನಾಂಕ 2 ರಂದು ಬೆಳಿಗ್ಗೆ ಏರ್ಪಡಿಸಲಾಗಿದ್ದ ಜಗದ್ಗುರು ಅಲ್ಲಮಪ್ರಭು ಶೂನ್ಯ ಪೀಠಾರೋಹಣವಾದ ಪ್ರಥಮ ವಾರ್ಷಿಕೋತ್ಸವ ಹಾಗೂ 2ನೆಯ ಪೀಠಾರೋಹಣ ಸಮಾರಂಭದಲ್ಲಿ ಉದ್ಘಾಟನೆ ನೆರವೇರಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತ, ಅಂದಿನ ಅಲ್ಲಮಪ್ರಭುದೇವರು ಶಿವಮೊಗ್ಗ ಜಿಲ್ಲೆಯವರೇ ಆಗಿದ್ದರು. ಈಗಲೂ ಸಹ ಆ ಪೀಠವನ್ನಲಂಕರಿಸಿದ ಪೂಜ್ಯ ಅಲ್ಲಮಪ್ರಭು ಸ್ವಾಮೀಜಿಯವರು ಶಿವಮೊಗ್ಗದವರೇ ಆಗಿರುವುದು ಎಷ್ಟು ಸಾಂಕೇತಿಕವಾಗಿದೆ ! ಎಂಥ ಭಾವನಾತ್ಮಕವಾದ ಸಂಬಂಧವಿದೆ ! ಎಂದು ನುಡಿದರಲ್ಲದೆ, 12 ನೆಯ ಶತಮಾನದಲ್ಲಿ ತಿರುಗಿ ಈಗ 21ನೆಯ ಶತಮಾನವಾಗುತ್ತಿದೆ ಎಂದು ಮಾರ್ಮಿಕವಾಗಿ ನುಡಿದರು.

ಶೂನ್ಯ ಪೀಠದ ಮೇಲೆ ಮೊದಲಿಗೆ ಗುರು ಬಸವಣ್ಣನವರ ಮೂರ್ತಿಯನ್ನು ಇರಿಸಿ ಪೂಜೆ ಸಲ್ಲಿಸಿ, ನಂತರ ಅಲ್ಲಮಪ್ರಭುದೇವರ ಫೋಟೋ ಹಾಗೂ ಪೂಜ್ಯ ಅಪ್ಪಾಜಿಯವರ ಮೂರ್ತಿಯನ್ನು ಕೂರಿಸಿ ಪೂಜೆ ಸಲ್ಲಿಸಲಾಯಿತು. ಅನಂತರ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರು ಪೀಠಾರೋಹಣ ಮಾಡಿದರು. ಪೀಠಾರೋಹಣಕ್ಕೂ ಮುಂಚೆ ಪೂಜ್ಯ ಸ್ವಾಮೀಜಿಯವರು ಬಸವ ಧ್ವಜಾರೋಹಣ ನೆರವೇರಿಸಿ ಗುರುಬಸವಣ್ಣನವರಿಗೆ ಪೂಜೆ ಸಲ್ಲಿಸಿದರು. ಪರಮ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಪುಷ್ಪವೃಷ್ಟಿ ಮಾಡಿ, ಆರತಿ ಬೆಳಗಿ ಪೂಜ್ಯ ಅಲ್ಲಮಪ್ರಭು ಸ್ವಾಮೀಜಿಯವರಿಗೆ ಶುಭಹಾರೈಸಿದರು. ಲಕ್ಷಾಂತರ ಬಸವ ಭಕ್ತರು ಮಾಲಾರ್ಪಣೆ ಮಾಡಿ ತಮ್ಮ ಭಕ್ತಿಪೂರ್ವಕ ಗುರುಕಾಣಿಕೆ ಸಲ್ಲಿಸಿದರು.

ಗುಲಬರ್ಗಾ ಹಾಲು ಒಕ್ಕೂಟದ ಅಧ್ಯಕ್ಷ ಶರಣ. ಚಂದ್ರಶೇಖರ್ ಸುಲ್ತಾನಪುರ, ಮಲ್ಲಿಕಾರ್ಜುನ ಮಾಲಿ ಪಾಟೀಲ ಹಾಗರಗಿ ಮತ್ತು ಸಾರಿಗೆ ಅಧಿಕಾರಿಗಳಾದ ಶರಣ. ಶಂಕರಪ್ಪ ಹಡಪದ (ಪಂಚಾಕ್ಷರಯ್ಯ) ಶಹಾಬಾದ್‌ನ ಮಾಜಿ ಪುರಸಭಾಧ್ಯಕ್ಷರಾದ ಶರಣ. ಸುಭಾಷ್ ಪವಾರ್ [illegible]ರು. ಬಸವಕಲ್ಯಾಣ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಬಸವರಾಜ ಪಾಟೀಲ ಶಿವಪುರ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Digitalized by e-Sahithya Documentation Forum
Sponsored by Sarayu Foundation Trust

ಏಪ್ರಿಲ್ 18 ರಿಂದ 29ರವರೆಗೆ ಬಸವ ಮಹಾಮನೆಯ ಆವರಣದಲ್ಲಿ ಬಸವ ಧರ್ಮ ಪೀಠದ ವತಿಯಿಂದ ಬಸವ ತತ್ತ್ವ ತರಬೇತಿ ಕಮ್ಮಟವನ್ನು ಹಮ್ಮಿಕೊಳ್ಳಲಾಗಿತ್ತು. ಯೋಗಾಸನ, ಪ್ರಾಣಾಯಾಮ, ಇಷ್ಟಲಿಂಗ ಪೂಜೆ ಮತ್ತು ಮದುವೆ, ದೀಕ್ಷಾಸಂಸ್ಕಾರ, ಶವಸಂಸ್ಕಾರ ಇತ್ಯಾದಿಗಳನ್ನು ಪ್ರಾಯೋಗಿಕ ಪ್ರಾತ್ಯಕ್ಷಿಕೆ ತೋರಿಸುವುದರ ಮೂಲಕ ತರಬೇತಿ ನೀಡಲಾಯಿತು. ಸುಮಾರು ಮುನ್ನೂರು ಶಿಬಿರಾರ್ಥಿಗಳು ಇದರ ಲಾಭವನ್ನು ಪಡೆದುಕೊಂಡರು. ಧಾರವಾಡದ ಪ್ರತಿಭಾ ಗರಗ ಮತ್ತು ಚಿತ್ರದುರ್ಗದ ವಚನ ಸುಧಾ ಹಾಗೂ ಸಂಗಡಿಗರು ಮಾಡಿದ ಕಲ್ಯಾಣ ಕ್ರಾಂತಿ ವಚನ ನೃತ್ಯ ಮತ್ತು ಬೀದರ ರಾಷ್ಟ್ರೀಯ ಬಸವ ದಳ ಹಾಗೂ ಶಿಬಿರಾರ್ಥಿಗಳು ಮಾಡಿದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಬಾಲಪ್ರತಿಭೆ ಭಾರ್ಗವಿ ಅಂಗಡಿಯವರ ವಚನ ನೃತ್ಯವು ಎಲ್ಲರ ಮನ ಸೆಳೆಯಿತು. ಒಟ್ಟಾರೆ ಈ ಬಾರಿಯ ಬಸವ ತತ್ತ್ವ ತರಬೇತಿ ಕಮ್ಮಟ ಮತ್ತು ಕಲ್ಯಾಣ ಪರ್ವ ಅತ್ಯಂತ ಯಶಸ್ವಿಯಾಗಿ ಜರುಗಿದ್ದು ನಾಡಿನ ಜನತೆ ಹುಬ್ಬೇರಿಸುವಂತಾಗಿದೆ.

ವರದಿ - ಪೂಜ್ಯಶ್ರೀ ಚನ್ನಬಸವಾನಂದ ಸ್ವಾಮಿಗಳು
ಬಸವ ಮಹಾಮನೆ, ಬಸವ ಕಲ್ಯಾಣ.

ಬಸವಾರ್ಪಣ

ಬಸವ ಧರ್ಮವು ಎಂದೂ ಅಳಿಯದ
ದಿವ್ಯ ಧರ್ಮವಾಗಿ ಬೆಳಗುತಿದೆ
ಈ ಕನ್ನಡ ತಾಯಿಯ ಮಡಿಲಲ್ಲಿ
ಈ ಶರಣ ಧರ್ಮದ ಸಿರಿಯಲ್ಲಿ ॥1॥

ದೇಶ ವಿದೇಶದ ಕಣ ಕಣದಲ್ಲೂ
ಬಸವ ಧರ್ಮವು ಪಸರಿಸಲಿ
ಶಾಂತಿ ಸ್ನೇಹ ಪ್ರೇಮ ಸಮತೆಯು
ಎಲ್ಲೆಡೆಯಲ್ಲೂ ತುಂಬಿರಲಿ ॥2॥

ಬಸವ ತತ್ತ್ವ ಜ್ಯೋತಿಯ ಎಲ್ಲರ
ಮನೆ ಮನಗಳಲ್ಲೂ ಬೆಳಗಿಸುವ
ಬಸವ ತತ್ತ್ವದ ವಚನದ ಸೌರಭ
ಕಲ್ಲುಕಲ್ಲಿನಲೂ ಕೆತ್ತಿಸುವ ॥3॥

ಬಸವ ಧರ್ಮದ ಪ್ರೀತಿಯ ಕುಡಿಗಳು
ಮನೆ ಮನೆಯಲ್ಲೂ ಜನ್ಮಿಸಲಿ
ಮಾತೆಯ ಶ್ರಮಕೆ ಹೆಗಲನು ನೀಡಿ
ಮಾತೆಯ ಹೃದಯಕೆ ಸ್ಪಂದಿಸಲಿ ॥4॥

ಬಸವಾತ್ಮಜೆಯ ಕುಡಿಗಳು ನಾವು
ಬಸವ ತತ್ತ್ವ ಹೊತ್ತು ಸಾರುವೆವು
ಬಸವ ಧರ್ಮ ಪೀಠಕೆ ಎಂದೆಂದೂ
ಎಮ್ಮಯ ತನುಮನಧನ ಅರ್ಪಿತವು ॥5॥

ಬಸವ ಧರ್ಮದ ಕೀರ್ತಿ ಪತಾಕೆಯ
ಮುಗಿಲೆತ್ತರಕೆ ಹಾರಿಸುವ
ವಿಶ್ವ ಪ್ರೇಮದ ಬೆಳೆಯನು ಬೆಳೆದು
ಬಸವ ಪಾದಕೆ ಅರ್ಪಿಸುವ ॥6॥

- ವೈ.ಜಿ. ಶ್ರೀಕಾಂತ
ರಾ.ಬ.ದ, ಭದ್ರಾವತಿ.

★★ ಕಲ್ಯಾಣ ಕಿರಣ ಮಾಸ ಪತ್ರಿಕೆಯ ಎಂದು ಪ್ರತಿಗಳು ನಿಮ್ಮ ವಿಳಾಸಕ್ಕೆ ಬರುತ್ತಿದ್ದರೆ ದಯಮಾಡಿ, ಚಂದಾ ಸಂಖ್ಯೆಯೊಂದಿಗೆ, ಕಾರ್ಯಾಲಯಕ್ಕೆ ಬರೆಯಿರಿ.

- ವ್ಯವಸ್ಥಾಪಕರು

ವಿದೇಶ ಪ್ರವಾಸಕ್ಕೆ ಹೊರಟ ಪೂಜ್ಯ ಶ್ರೀ ಮಾತಾಜಿಯವರಿಗೆ ಹೃದಯ ಸ್ಪರ್ಶಿ

ಬೀಳ್ಕೊಡುಗೆ

- ವರದಿ : ಮಾತೆ ಕಸ್ತೂರಿ ದೇವಿ

ದಿ. 14-6-2003, ಶರಣ(ಶನಿ)ವಾರದಂದು, ಬಸವ ಭಕ್ತರಿಗೆ ಸಂಭ್ರಮದ ದಿನ. ವಿಶ್ವಶಾಂತಿಯ ಸೂತ್ರಗಳನ್ನು ತನ್ನ ಒಡಲಲ್ಲಿ ಬಚ್ಚಿಟ್ಟುಕೊಂಡಿರುವ ಬಸವಣ್ಣನವರ ತತ್ತ್ವಗಳು ಜಗತ್ತಿನಾದ್ಯಂತ ಪ್ರಚಾರಗೊಳ್ಳಬೇಕೆಂಬ ಮಹಾಸಂಕಲ್ಪವನ್ನು ಈಡೇರಿಸಲು ಕಾಯುತ್ತಿದ್ದ ಸುದಿನವದು. ಅಂದರೆ ಅನೇಕ ಸಹೃದಯರಿಂದ ಆಹ್ವಾನಿಸಲ್ಪಟ್ಟು ಉತ್ತರ ಅಮೆರಿಕಾದ ಯುನೈಟೆಡ್ ಸ್ಟೇಟ್ಸ್ ಅನ್ನು ಸಂದರ್ಶಿಸಲು ಹೊರಟಿರುವ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರನ್ನು ಹೃತ್ಪೂರ್ವಕವಾಗಿ ಬೀಳ್ಕೊಡಲು, ಬೆಂಗಳೂರಿನ ವಿಶ್ವ ಕಲ್ಯಾಣ ಮಿಷನ್, ಲಿಂಗಾಯತ ಧರ್ಮ ಮಹಾಸಭಾ ಮತ್ತು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ಗಳ ವತಿಯಿಂದ ನಗರದ ಸರ್. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಬೆಳಿಗ್ಗೆ 10-30 ಗಂಟೆಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಮಾಲಾರ್ಪಣೆ ಮತ್ತು ಪುಷ್ಪವೃಷ್ಟಿಯೊಂದಿಗೆ ಪೂಜ್ಯ ಶ್ರೀ ಮಾತಾಜಿಯವರನ್ನು ಸ್ವಾಗತಿಸಲಾಯಿತು. ಗುರು ಬಸವ ಪೂಜೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಧ್ವಜಾರೋಹಣವನ್ನು ನೆರವೇರಿಸಿದ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ, ಜಗದ್ಗುರುಗಳಾದ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರು ಮಾತನಾಡುತ್ತಾ "ಇದೀಗ ಮೂರನೆ ಬಾರಿಗೆ ಭಾರತೀಯ ಸಂಸ್ಕೃತಿಯೊಂದಿಗೆ ಬಸವ ತತ್ತ್ವದ ವೈಶಿಷ್ಟ್ಯವನ್ನು ವಿದೇಶಗಳಿಗೆ ಸಾರಲು ಹೊರಟಿರುವ ಪೂಜ್ಯ ಮಾತಾಜಿಯವರು ಜಗತ್ತಿನ ಮೊಟ್ಟ ಮೊದಲ ಧೀರ ಸನ್ಯಾಸಿನಿ" ಎಂದು ಬಣ್ಣಿಸಿದರು. ಈ ಸಭೆಯಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದ ಲಿಂಗಾಯತ ಧರ್ಮ ಮಹಾಸಭಾದ ಅಧ್ಯಕರಾದ ಶರಣ. ಎಸ್. ಪುಟ್ಟರುದ್ರ ಅವರು "ಇಂದು ನಮಗೆಲ್ಲ ನಲಿವಿನೊಂದಿಗೆ ನೋವನ್ನು ಸಮಾನವಾಗಿ ಹಂಚಿಕೊಳ್ಳುವ ದಿನ. ಏಕೆಂದರೆ ಪೂಜ್ಯ ಮಾತಾಜಿಯವರು ಇಂದು ಅಮೆರಿಕಾಕ್ಕೆ ಹೊರಟ ಮೇಲೆ ಇನ್ನು 3-4 ತಿಂಗಳು ದರ್ಶನ ಭಾಗ್ಯ ಸಿಗುವುದಿಲ್ಲ. ಆದರೂ ಮಹಾಸಂಕಲ್ಪವನ್ನು ಪೂರೈಸಲಿಕ್ಕೆಂದು ಹೊರಟಿರುವ ಪೂಜ್ಯ ಮಾತಾಜಿಯವರನ್ನು ಹೃದಯ ತುಂಬಿ ಬೀಳ್ಕೊಡೋಣ" ಎಂದರು.

ಸಮಾರಂಭದ ಉದ್ಘಾಟನೆಯನ್ನು ಮಂತ್ರನಾದದೊಂದಿಗೆ ನೆರವೇರಿಸಿದ ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರದ ನಿರ್ದೇಶಕರಾದ ಶರಣ. ಡಾ॥ ಎ.ಎಸ್. ಪ್ರಭುದೇವ ಅವರು ಮಾತಾಡುತ್ತಾ "ಮಾತೆ ಮಹಾದೇವಿಯವರು ಅಗಮ್ಮ ಗುರುಕುಲದ ಅಪರಂಜಿ. ಬಸವ ಪ್ರಜ್ಞೆಯ ಪ್ರಾಕಾರದೊಳಗೆ ಕಾಯಕದೊಂದಿಗೆ ತಾತ್ವಿಕ ಹಾಗೂ ಸಾತ್ವಿಕ ಆಯಾಮದಿಂದ [illegible] ಪೂಜಿಸುತ್ತಾ, ಯಶಸ್ವಿಯಾಗಿದ್ದಾರೆ. ಅನುಯಾಯಿಗಳಿಗೆ ಕತ್ತಲಿನಿಂದ ಬೆಳಕಿನ ಮಾರ್ಗ ತೋರಿದ್ದಾರೆ. ಆಧ್ಯಾತ್ಮ ಮೌಲ್ಯಗಳನ್ನು

Digitalized by e-Sahithya Documentation Forum
Sponsored by Sarayu Foundation Trust

ಕಳೆದುಕೊಂಡಿರುವ ಅಮೆರಿಕದಲ್ಲಿ ಮಾತಾಜಿಯವರು ಈ ಮೌಲ್ಯಗಳನ್ನು ಘೋಷಿಸಲು ಹೊರಟಿರುವುದು ಸಂತಸದ ವಿಷಯ" ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಬೆಂಗಳೂರಿನ ಜೈನ್ ವೃತ್ತಿಪರ ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿರುವ ಶರಣ. ಡಿ. ಪಿ. ಪ್ರಕಾಶ್ ಮಾತನಾಡುತ್ತಾ "ಪೂಜ್ಯ ಮಾತಾಜಿಯವರು ನಡೆದಾಡುವ ವಚನ ಸಾಹಿತ್ಯ. ಇದರಿಂದಾಗಿ ಜಾತಿ ವರ್ಗ ವರ್ಣ ದ್ವೇಷದಿಂದ ಮಂಕಾಗಿರುವ ಜಗತ್ತಿಗೆ ಪೂಜ್ಯ ಮಾತಾಜಿಯವರು ಹೊಸ ಬೆಳಕನ್ನು ತೋರುವುದರಲ್ಲಿ ಸಂದೇಹವಿಲ್ಲ" ಎಂದರು. ವಿಶೇಷ ಆಹ್ವಾನಿತರಾಗಿ ಬಂದಿದ್ದ ಸುಮಂಗಲಿ ಸೇವಾಶ್ರಮದ ಅಧ್ಯಕ್ಷರಾದ ಶರಣೆ. ಎಸ್.ಜಿ. ಸುಶೀಲಮ್ಮನವರು ಪೂಜ್ಯ ಮಾತಾಜಿಯವರೊಂದಿಗೆ ಕಳೆದ ತಮ್ಮ ಪವಿತ್ರಕ್ಷಣಗಳನ್ನು ಸ್ಮರಿಸುತ್ತಾ, ಮಾತೆಯವರ ವಿದೇಶ ಪ್ರಯಾಣಕ್ಕೆ ಶುಭವನ್ನು ಕೋರಿದರು.

ಭಕ್ತವೃಂದ ಮತ್ತು ಶಿಷ್ಯ ವೃಂದದವರಿಂದ ಭಕ್ತಿಪೂರ್ವಕವಾದ ಬೀಳ್ಕೊಡುಗೆಯನ್ನು ಸ್ವೀಕರಿಸಿದ ಪೂಜ್ಯ ಮಾತಾಜಿಯವರು ತಮ್ಮ ಅಮೆರಿಕ ಪ್ರವಾಸದ ಧ್ಯೇಯೋದ್ದೇಶಗಳನ್ನು ವಿವರಿಸಿದರು. "ಮೂರುವರೆ ತಿಂಗಳ ಪ್ರವಾಸ ಸಂದರ್ಭದಲ್ಲಿ ಅಲ್ಲಿನ ನಾಗರಿಕರಿಗೆ ಬಸವ ಸಂದೇಶದೊಂದಿಗೆ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸಲಾಗುತ್ತದೆ. ಈ ಸಂದರ್ಭದಲ್ಲಿ ಅಮೆರಿಕ ಮಾತ್ರವಲ್ಲದೆ ಬೇರೆ ದೇಶಗಳಲ್ಲೂ ಬಸವ ಸಂದೇಶ ಸಾರಲಾಗುವುದು. ಅಮೆರಿಕ ಶ್ರೀಮಂತ ರಾಷ್ಟ್ರ. ಆದರೆ ಅಲ್ಲಿನ ಜನರಿಗೆ ಮಾನಸಿಕ ನೆಮ್ಮದಿ ಇಲ್ಲ. ಈ ಹಿನ್ನೆಲೆಯಲ್ಲಿ ಬಸವಣ್ಣನವರ ಸಂದೇಶ ಸಾರುವುದು ಅಗತ್ಯವಾಗಿದೆ. ಬಸವಣ್ಣನವರ ವಿಶ್ವಕುಟುಂಬ ಸಂದೇಶ ಇಂದಿಗೂ ಪ್ರಸ್ತುತ. ಕನ್ನಡ ನಾಡು ಬಸವಣ್ಣನವರ ಅಮೂಲ್ಯ ಸಂಪತ್ತು ಎನಿಸಿದ ವಚನ ಸಾಹಿತ್ಯವನ್ನು ಹೊಂದಿದೆ. ಬಸವಣ್ಣನವರೇ ಜಗತ್ತಿನ ಮೊದಲ ಸಮತಾವಾದಿ" ಎಂದರು.

ಮುಂದುವರಿದು "ವಿದೇಶಗಳಲ್ಲಿ ಬಸವ ತತ್ತ್ವ ಪ್ರಸಾರಕ್ಕಾಗಿ ಯೂನಿವರ್ಸಲ್ ಸೆಂಟರ್ ಆಫ್ ಬಸವ ಫಿಲಾಸಫಿ (Universal Centre of Basava Philosophy) ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗುತ್ತದೆ. ಈ ಸಂಸ್ಥೆಯ ವತಿಯಿಂದ ವಚನ ಸಾಹಿತ್ಯದ ಭಾಷಾಂತರ ಮತ್ತು ಪ್ರಕಟಣಾ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತದೆ. ಅಲ್ಲಿನ ಜನರಿಗೆ ಧರ್ಮ ಮತ್ತು ಆಧ್ಯಾತ್ಮ ಸಂಸ್ಕಾರಗಳ ಬಗ್ಗೆ ಅರಿವು ಮೂಡಿಸಿ, ಪ್ರಾತ್ಯಕ್ಷಿಕೆಯನ್ನು ತೋರಿಸಿಕೊಡಲಾಗುತ್ತದೆ. ಧಾರ್ಮಿಕ ತರಬೇತಿ ಶಿಬಿರಗಳನ್ನು, ಪ್ರಾಣಾಯಾಮ, ಧ್ಯಾನ, ತ್ರಾಟಕ ಯೋಗದ ತರಗತಿಗಳನ್ನು ನಡೆಸಲಿದ್ದೇವೆ. ಅಲ್ಲದೆ 2004ನೆಯ ಇಸವಿಯ ಆಗಸ್ಟ್ ತಿಂಗಳಲ್ಲಿ ಯು.ಎಸ್.ಎ ಯಲ್ಲಿ ನಡೆಸಲಿರುವ ಅಂತರ ರಾಷ್ಟ್ರೀಯ ಬಸವ ಧರ್ಮ ಸಮ್ಮೇಳನಕ್ಕಾಗಿ ಸೂಕ್ತ ಸ್ಥಳವನ್ನು ಆಯ್ಕೆ ಮಾಡಿ, ಸಮ್ಮೇಳನ ನಿರ್ವಹಣೆಗೆಂದು ಸ್ವಾಗತ ಸಮಿತಿಯನ್ನು ರಚಿಸಲಾಗುತ್ತದೆ" ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಬಸವ ಕಲ್ಯಾಣದ ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರು ವಹಿಸಿದ್ದರು. ಕೂಡಲಸಂಗಮದ ಬಸವ ಧರ್ಮ ಪೀಠದ ಚರಜಂಗಮರಾದ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ

ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು, ಬೀದರಿನ ಬಸವ ಮಂಟಪದ ಪೂಜ್ಯ ಶ್ರೀ ಮಾತೆ ನಿಶ್ಚಲಾಂಬ, ಬಸವ ಕಲ್ಯಾಣದ ಬಸವ ಮಹಾಮನೆಯ ಪೂಜ್ಯ ಶ್ರೀ ಮಾತೆ ನೀಲಗಂಗಾದೇವಿ, ಬಸವ ಗಂಗೋತ್ರಿಯ ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ ಮುಂತಾದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಶರಣೆ. ಚಂದ್ರಮ್ಮ ಸದಾನಂದ ಸ್ವಾಮಿಯವರು ಸಭಾ ನಿರ್ವಹಣೆ ಮಾಡಿದರು.

ಕಾರ್ಯಕ್ರಮದ ಕೊನೆಯಲ್ಲಿ, ಕಾತುರದಿಂದ ನಿರೀಕ್ಷಿಸುತ್ತಿದ್ದ "ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ" ಎಂಬ ಕಲ್ಯಾಣ ಕ್ರಾಂತಿ ಕಥೆಯ ಜಾನಪದ ಗೀತೆಯ ನೃತ್ಯರೂಪಕವನ್ನು ಮನೋಜ್ಞವಾಗಿ ಕಣ್ಣಿಗೆ ಕಟ್ಟಿದಂತೆ, ರಾಷ್ಟ್ರೀಯ ಬಸವ ದಳದ ಕುಮಾರಿಯರಾದ ವಚನ ಸುಧಾ, ಪ್ರತಿಭಾ ಗರಗದ, ಮಮತಾ ಮಮ್ಮಿಗಟ್ಟಿ ಮತ್ತು ತಂಡದವರು ನಡೆಸಿಕೊಟ್ಟರು. ಕುಮಾರಿ ವೀಣಾ ಬಸವರಾಜಪ್ಪ ಅವರು ಅಭಿನಯಿಸಿದ ಮಂಗಲ ನೃತ್ಯ ಎಲ್ಲರ ಮನಸ್ಸನ್ನು ಸೂರೆಗೊಂಡಿತು.

ಅಂದು ಸಂಜೆ ಏಳು ಗಂಟೆಗ ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ಶರಣ ಬಂಧುಗಳೆಲ್ಲ ಸೇರಿ "ನೆನಹು, ಮಂಗಲ -ಜಯಘೋಷ "ದೊಂದಿಗೆ ಪೂಜ್ಯ ಮಾತಾಜಿಯವರನ್ನು ಹೃತ್ಪೂರ್ವಕವಾಗಿ ಬೀಳ್ಕೊಟ್ಟರು. ವಿಶ್ವಭ್ರಾತೃತ್ವದ ಮಹಾಮಣಿಹವನ್ನು ತನ್ನ ಒಡಲಲ್ಲಿ ಹೊತ್ತುಕೊಂಡು ಹಾರಿದ ಬಾನಿನ ಹಕ್ಕಿ ಆಗಸದಲ್ಲಿ ಕಣ್ಮರೆಯಾಗುತ್ತಲೆ ತಾಯನಗಲಿದ ಕರುವಿನಂತೆ ಮೂಕ ವೇದನೆಯಿಂದ ಶರಣ ಬಂಧುಗಳು ತಮ್ಮ ತಮ್ಮ ಗೂಡು ಸೇರಿದರು.

ಓಂ ಬಸವಣ್ಣಾ ನೀವಂದು ಕಲ್ಯಾಣ ಪಟ್ಟಣವ ತೊರೆದಿರಾಗಿ ಅದು ಕತ್ತಲಾಯಿತ್ತು.
ಶ್ರೀ ಬಸವಣ್ಣಾ ನೀವಿಲ್ಲದ ಕಲ್ಯಾಣ ಪಟ್ಟಣ ಆತ್ಮವಿಲ್ಲದ ದೇಹದಂತಾಯಿತ್ತು
ಗು ಬಸವಣ್ಣಾ ನೀವಿಲ್ಲದ ಕಲ್ಯಾಣ ಪಟ್ಟಣ ಸಿದ್ಧರಾಮರಿಗೆ ಬೇಡವಾಯಿತ್ತು
ರು ಬಸವಣ್ಣಾ ನೀವು ಮರಳಿ ಮರ್ತ್ಯಕ್ಕೆ ಬರುವಿರೆಂಬ ವಚನವಿಂದು ದಿಟವಾಯಿತ್ತು
ಬ ಬಸವಣ್ಣಾ ನೀವು ಮಾತಾಜಿಯವರಲ್ಲಿ ಬೆರೆದಿರಾಗಿ ನಿಮ್ಮ ದರ್ಶನವಾಯಿತ್ತು
ಸ ಬಸವಣ್ಣಾ ನಿಮ್ಮಾತ್ಮಜೆ ಕಲ್ಯಾಣ ಪಟ್ಟಣವ ಹೊಕ್ಕರಾಗಿ ಕತ್ತಲು ಹರಿಯಿತ್ತು
ವ ಬಸವಣ್ಣಾ ನಿಮ್ಮಾತ್ಮಜೆಯಿಂದಾಗಿ ಶರಣರೆಲ್ಲರೂ ಕಲ್ಯಾಣಕ್ಕೆ ಬರುವಂತಾಯಿತ್ತು
ಲಿಂ ಬಸವಣ್ಣಾ ನಿಮ್ಮಾತ್ಮಜೆಯಿಂದ ನೀವು ಮಾಡಿಸಿದ ಕಲ್ಯಾಣ ಪರ್ವ ಸುಫಲ ಇತಿಹಾಸವಾಯಿತ್ತು
ಗಾ ಬಸವಣ್ಣಾ ನಿಮ್ಮ ಕಲ್ಯಾಣ ಪಟ್ಟಣ ಸಂತಸ-ಸಂಭ್ರಮದಿಂದ ನಲಿದಾಡಿತ್ತು
ಯ ಬಸವಣ್ಣಾ ಕಲ್ಯಾಣ ಪರ್ವದಲ್ಲಿ ಬೆರೆದವರ ಜನ್ಮ ಪಾವನವಾಯಿತ್ತು
ನ ಬಸವಣ್ಣಾ ನಿನ್ನ ಲಿಂಗದೇವನ ಜಯಘೋಷ ಹೊನಲಾಗಿ ಹರಿಯಿತ್ತು
ಮಃ ಬಸವಣ್ಣಾ ನಿನ್ನ ಕಂದಳ ಪ್ರಿಯ ಸರ್ವೇಶ ಪ್ರಭುವಿನ ದರ್ಶನವಾಯಿತ್ತು

- ಬಸವ ಕಂದ

ಸರೋಜಮ್ಮ ನಾಗರಾಜು,
ರಾ.ಬ.ದ, ಮೈಸೂರು .

Digitalized by e-Sahithya Documentation Forum
Sponsored by Sarayu Foundation Trust

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಬಸವ ತತ್ತ್ವ ಪರೀಕ್ಷೆಗಳು 2002 ಇಸವಿ - ಫಲಿತಾಂಶಗಳು

ಬಸವ ತತ್ತ್ವ ಪ್ರವೇಶ - ಮೊದಲನೆಯ ಪರೀಕ್ಷೆ

ಒಂದನೆಯ ವರ್ಗ

110	ಸಂಗಶೆಟ್ಟಿ ಕಂಟೆಪ್ಪ ಶೆಟಕಾರ	ಜೀದರ ಕೇಂದ್ರ
112	ಬಸವರಾಜ ಗುರುನಾಥ ಷೇಡಕರ	ಜೀದರ ಕೇಂದ್ರ
155	ಶ್ರೀಕಾಂತ ಹಾವಗಿರಾವ ಪೇಳಗೆ	ಠಾಣಾಕುಶನೂರ ಕೇಂದ್ರ, ಜೀದರ್
162	ಶಿವಕುಮಾರ ಭೀಮಪ್ಪ ಗಂದಗೆ	- " -
163	ಭಾಗ್ಯವತಿ ಭೀಮಪ್ಪ ಗಂದಗೆ	- " -

ಎರಡನೆಯ ವರ್ಗ

108	ವಿಶ್ವನಾಥ ವೈಜನಾಥ ಕೋರೆ	ಜೀದರ ಕೇಂದ್ರ
109	ನಾಗಲಿಂಗಮ್ಮ ಕಂಟೆಪ್ಪ ಶೆಟಗಾರ	- " -
113	ಸುಮತಿ ವಿಶ್ವನಾಥ ಪಾಟೀಲ	- " -
114	ಸುಜ್ಞಾನಿ ವಿಶ್ವನಾಥ ಪಾಟೀಲ	- " -
137	ಎಸ್.ಪ್ರಫುಲ್ಲ ತಂದೆ ನಾರಾಯಣಪ್ಪ	ಓಬಳಾಪುರ ಕೇಂದ್ರ ಚಿತ್ರದುರ್ಗ
139	ಎಲ್.ವಿಜಯಲಕ್ಷ್ಮೀ ತಂದೆ ಲಿಂಗರಾಜು	- " -
159	ಆರತಿ ಅಮೃತರಾವ ವಲ್ಲೇಪೂರೆ	ಠಾಣಾಕುಶನೂರ ಕೇಂದ್ರ, ಜೀದರ್
160	ನೀಲಾಂಜಿಕಾ ಚಂದ್ರಕಾಂತ ಮುಗಟೆ	- " -
161	ಸುಧಾರಾಣಿ ರಾಜಕುಮಾರ ಮುಗಟೆ	- " -
164	ಅಶ್ವಿನಿ ತಂದೆ ಧೂಳಯ್ಯ	- " -
165	ಜಯಶ್ರೀ ಪಂಚಪ್ಪ ವಲ್ಲೇಪೂರೆ	- " -
167	ರೇಖಾ ಗಂಡ ಪರಮೇಶ್ವರ ವಲ್ಲೇಪೂರೆ	- " -
172	ಸಂಗಮೇಶ ರಾಜಪ್ಪ ವಲ್ಲೇಪೂರೆ	- " -
173	ಸಿದ್ಧಲಿಂಗ ತಂದೆ ಮಹಾಲಿಂಗರಾಯ	ಸಣ್ಣಹೂಸೂರುಕೇಂದ್ರ, ರಾಯಚೂರು
174	ಚನ್ನಪ್ಪ ತಂದೆ ಬಸವರಾಜ	- " -
175	ಭಾಗ್ಯ ತಂದೆ ರಮೇಶ	- " -
176	ಕವಿತಾ ತಂದೆ ಮಹಾದೇವಪ್ಪ	- " -
177	ಕವಿತಾ ತಂದೆ ಆದೆಪ್ಪ	- " -
178	ರೇಣುಕಾ ತಂದೆ ರಾಮಪ್ಪ	- " -
179	ಕೆ. ಲಿಂಗಮ್ಮ ತಂದೆ ಮಲ್ಲಯ್ಯ	- " -
181	ಓಬಳೇಶ ತಂದೆ ಮೂರುತಿ ದಾಸರು	ಹೀರಾಪೂರ ಕೇಂದ್ರ, ರಾಯಚೂರು

Digitalized by e-Sahithya Documentation Forum
Sponsored by Sarayu Foundation Trust

183	ಮಹಾದೇವಿ ತಂದೆ ವೆಂಕಟೇಶ	ಹೀರಾಪೂರ ಕೇಂದ್ರ, ರಾಯಚೂರು
184	ಹನುಮಂತಿ ತಂದೆ ಅಯ್ಯಪ್ಪ	- " -
186	ಶಿವಕುಮಾರ ಶಿವಶರಣಪ್ಪ ಹುಡದಳ್ಳಿ	ಪೋಲಕಪಳ್ಳಿ ಕೇಂದ್ರ, ಕಲಬುರ್ಗಿ
187	ಸಾಯಬಣ್ಣ ಝುರಣಪ್ಪ ಪೂಜಾರಿ	- " -
198	ಮಲ್ಲಿಕಾರ್ಜುನ ಕಾಡಂಗೇರಿ	ರಾಯಚೂರು ಕೇಂದ್ರ
111	ಪೂಜಾ ಕಾಶಿನಾಥ ಸೂರ್ಯವಂಶಿ	ಜೀದರ ಕೇಂದ್ರ
118	ಸತೀಶ ಕುಮಾರ ಬಾಬುರಾವ ಮಾಳಗೆ	ಜೀದರ ಕೇಂದ್ರ
138	ಎಸ್. ಮಹಾದೇವಮ್ಮ ತಂದೆ ನಾಗಪ್ಪ	ಓಬಳಾಪುರ ಕೇಂದ್ರ, ಚಿತ್ರದುರ್ಗ
147	ಕೆ.ಎಲ್. ಸ್ಫೂರ್ತಿ ತಂದೆ ಲಕ್ಷ್ಮೀ ನಾರಾಯಣ	- " -
152	ಆರತಿ ವೈಜನಾಥ ಪನ್ಸಾಳೆ	ಠಾಣಾಕುಶನೂರ ಕೇಂದ್ರ, ಜೀದರ
153	ಬಸವರಾಜ ಅಡಿವೆಪ್ಪ ಬುಕ್ಕಾ	- " -
182	ಪ್ರಾಣೇಶ ತಂದೆ ಮನೋಹರ	ಹೀರಾಪೂರ ಕೇಂದ್ರ, ರಾಯಚೂರು
185	ಸುಧೀರಬಾಬು ಬಸವರಾಜ ಕನ್ನ	ಪೋಲಕ ಪಳ್ಳಿ ಕೇಂದ್ರ, ಕಲಬುರ್ಗಿ
188	ಗಿರಿಜಾ ಗಂಡ ಮಹಾಂತೇಶ್ವರ ಸಜ್ಜನಶೆಟ್ಟಿ	- " -
189	ಬಸವರಾಜ ವಿಶ್ವನಾಥ ಪಾಟೀಲ	- " -
193	ಅಣ್ಣವೀರಪ್ಪ ಬಸವಣ್ಣಪ್ಪ ಸೂರವಾರ	- " -
195	ಅಲ್ಲಮಪ್ರಭು ಸೂರ್ಯಕಾಂತ ಹುಲಿ	- " -
196	ಸಂಗಯ್ಯ ಕಲ್ಯಾಣಯ್ಯ ಹಿರೇಮಠ	- " -
187	ಅಜಯ ಲಕ್ಷ್ಮೀ ತಂದೆ ಬಂದಪ್ಪ	ರಾಯಚೂರು ಕೇಂದ್ರ

ಬಸವ ತತ್ತ್ವ ಪರಿಚಯ - ಎರಡನೆಯ ಪರೀಕ್ಷೆ

ಎರಡನೆಯ ವರ್ಗ

201	ಪ್ರಭುಲಿಂಗ ವೈಜನಾಥ ರಾಜಗಿರೆ	ಜೀದರ ಕೇಂದ್ರ
204	ಸುಮಿತ್ರಾ ಶಿವಕುಮಾರ ಪಾಟೀಲ	- " -
205	ರಾಜೇಶ್ವರಿ ಕಂಟೆಪ್ಪ ಶೆಟಕಾರ	- " -
207	ಚೇತನಾ ಬಸವರಾಜ ಸಂಗಮದ	- " -
208	ಸಿದ್ಧವೀರ ಬಸವರಾಜ ಸಂಗಮದ	- " -
211	ವಿಶ್ವನಾಥ ತಂದೆ ಬಸವರಾಜ	ಸಣ್ಣಹೊಸೂರು ಕೇಂದ್ರ, ರಾಯಚೂರು
212	ಬಡೆಸಾಬ ತಂದೆ ಸಲೀಂ ಸಾಬ	- " -
213	ಬಸವರಾಜ ತಂದೆ ನರಸಪ್ಪ	- " -
215	ಪಾರ್ವತಿ ತಂದೆ ಸಣ್ಣಮುನಿಯಪ್ಪ	- " -
219	ಭ್ರಮರಾಂಬಾ ತಂದೆ ವೀರನಗೌಡ	- " -

ಮೂರನೆಯ ವರ್ಗ

203	ಗಿರೀಶ ಶಿವಕುಮಾರ ಪಾಟೀಲ	ಜೀದರ ಕೇಂದ್ರ
206	ಚನ್ನವೀರ ಬಸವರಾಜ ಸಂಗಮದ	- " -
214	ನಿರ್ಮಲಾ ತಂದೆ ಶರಣಪ್ಪ	ಸಣ್ಣ ಹೊಸೂರು ಕೇಂದ್ರ, ರಾಯಚೂರು
216	ಬಸಮ್ಮ ತಂದೆ ಭೀಮೇಶ	- " -
217	ಶಶಿಕಲಾ ತಂದೆ ರಾಮಣ್ಣ	- " -
218	ಜಿ. ನಿರ್ಮಲಾ ತಂದೆ ಮಲ್ಲಯ್ಯ	- " -
220	ಬೂದೆಮ್ಮ ತಂದೆ ರಾಮಣ್ಣ	- " -
221	ಗೋವಿಂದಮ್ಮ ತಂದೆ ಎಸ್. ಈರಣ್ಣ	ಹೀರಾಪೂರ ಕೇಂದ್ರ, ರಾಯಚೂರು
222	ಮಲ್ಲಿಕಾರ್ಜುನ ತಂದೆ ಈರಣ್ಣ	- " -
223	ಶಿವಮ್ಮ ತಂದೆ ಕಿಷ್ಟಯ್ಯ	- " -
224	ಮಲ್ಲೇಶ ತಂದೆ ಹನುಮಯ್ಯ	- " -
225	ಶಾರದಾ ತಂದೆ ಸಿದ್ಧಪ್ಪಗೌಡ	- " -
226	ತಮ್ಮಣ್ಣ ತಂದೆ ತಿಮ್ಮಣ್ಣ	- " -
227	ವೀರೇಶ ತಂದೆ ಯಂಕೋಬ	- " -

ಬಸವ ತತ್ತ್ವ ಪ್ರವೀಣ - ಮೂರನೆಯ ಪರೀಕ್ಷೆ

306	ಅನುಷಾ ತಂದೆ ತಾಯಣ್ಣ	ರಾಯಚೂರು ಕೇಂದ್ರ

ಶುಭಹಾರೈಕೆಗಳು

ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳಿಗೂ ಮತ್ತು ಪರೀಕ್ಷೆಗಳನ್ನು ನಡೆಸಿದ ಕೇಂದ್ರ ಸಂಚಾಲಕರಿಗೂ ಶುಭಾಶಯಗಳು.

- ಪೂಜ್ಯ ಶ್ರೀಮದ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ.

ಸೂಚನೆ : 2003ನೇ ಇಸವಿಯ ಬಸವ ತತ್ತ್ವ ಪರೀಕ್ಷೆಗಳು ಸೆಪ್ಟಂಬರ್ ತಿಂಗಳಲ್ಲಿ ನಡೆಯುವವು. ಪರೀಕ್ಷೆಗಳಿಗೆ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 15-8-2003. ಪರೀಕ್ಷೆಗಳ ಕುರಿತು ವಿವರಣೆಯುಳ್ಳ ನಿಯಮಾವಳಿ ಪುಸ್ತಕ ಹಾಗೂ ಇತರ ಮಾಹಿತಿಗಾಗಿ ರೂ. 5ರ ಅಂಚೆಚೀಟಿ ಲಗತ್ತಿಸಿದ ಸ್ವವಿಳಾಸದ ಲಕೋಟೆ ಕಳುಹಿಸಿ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಿರಿ :

ಶರಣ.ಕಲ್ಯಾಣಪ್ಪ ಪರಮಾದಿ
ಸಂಚಾಲಕರು, ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ
ಜಿಬಸವ ಚೈತನ್ಯಟಿ, ಬಸವ ನಗರ , ಹೆಗ್ಗೆರೆ ಹತ್ತಿರ,
ಹುಬ್ಬಳ್ಳಿ-580024, ಜಿ-ಧಾರವಾಡ , [illegible]-0836-306106

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ **"ಕಲ್ಯಾಣ ನಗರ"** ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-[illegible] X [illegible]'-ವಿಸ್ತೀರ್ಣ ೧೨೦೦ ಚ.ಅಡಿಗಳು

Digitalized by e-Sahithya Documentation Forum
Sponsored by Sarayu Foundation Trust

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸ-ಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ , ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.


ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

ಬಸವ ತತ್ತ್ವ ಪ್ರಚಾರಾರ್ಥ ವಿದೇಶ ಪ್ರವಾಸ ಕೈಗೊಂಡಿರುವ ಪರಮ ಪೂಜ್ಯ ಶ್ರೀ
ಮಹಾ ಜಗದ್ಗುರು ಮಾತೆ ಮಹಾದೇವಿಯವರು



Digitalized by e-Sahithya Documentation Forum
Sponsored by Sarayu Foundation Trust

CPMG/KA/BGW - 50/2003 - 2005
WPP (W) - 17 R. No. 19980/70



ಪೂಜ್ಯಶ್ರೀ: ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳಿಂದ
ಶೂನ್ಯ ಪೀಠಾರೋಹಣ

Digitalized by e-Sahithya Documentation Forum
Sponsored by Sarayu Foundation Trust